ಸಂಪುಟ 01 | ಸಂಚಿಕೆ 233 ಬುಧವಾರ 28 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಅನಿಮೇಷನ್ ದಿನ (International Animation Day) ಅನಿಮೇಷನ್ ಕಲೆ, ಕಾರ್ಟೂನ್‌ಗಳು ಮತ್ತು ಅನಿಮೇಟೆಡ್ ಚಲನಚಿತ್ರಗಳ ಮಹತ್ವವನ್ನು ಗುರುತಿಸುವ ದಿನ.

2)ರಾಷ್ಟ್ರೀಯ ತುರ್ತು ಸೇವಾ ಸಿಬ್ಬಂದಿ ದಿನ (National First Responders Day) ತುರ್ತು ಪರಿಸ್ಥಿತಿಗಳಲ್ಲಿ ಜನರ ಜೀವ ರಕ್ಷಿಸಲು ಕಾರ್ಯನಿರ್ವಹಿಸುವ ಅಗ್ನಿಶಾಮಕ ಸಿಬ್ಬಂದಿ, ತುರ್ತು ವೈದ್ಯಕೀಯ ಸಿಬ್ಬಂದಿ ಮತ್ತು ಇತರ ರಕ್ಷಣಾ ಕಾರ್ಯಕರ್ತರನ್ನು ಗೌರವಿಸುವ ದಿನ.

3) ವನ್ಯ ಆಹಾರಗಳ ದಿನ (Wild Foods Day)
ಪ್ರಕೃತಿಯಲ್ಲಿ ದೊರೆಯುವ ಆಹಾರಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ಸಾಂಪ್ರದಾಯಿಕ ಆಹಾರ ಪದ್ಧತಿಗಳ ಮಹತ್ವವನ್ನು ಅರಿಯಲು ಪ್ರೇರೇಪಿಸುವ ದಿನ.

4)ರಾಷ್ಟ್ರೀಯ ಆಂತರಿಕ ವೈದ್ಯಕೀಯ ದಿನ (National Internal Medicine Day) ಆಂತರಿಕ ವೈದ್ಯಕೀಯ ಕ್ಷೇತ್ರದ ವೈದ್ಯರ ಸೇವೆ ಮತ್ತು ಕೊಡುಗೆಯನ್ನು ಗೌರವಿಸುವ ದಿನ.

ಸುಭಾಷಿತ

ಮುಂದಿರುವ ಹುಣ್ಣಿಮೆಯ ಸೊಬಗನ್ನು
ಸವಿಯದೆ ಮುಂಬರಲಿರುವ
ಅಮಾವಾಸ್ಯೆಯನ್ನು ನೆನೆದು ಕೊರಗುವುದು
ವಿವೇಕವೆನ್ನಿಸದು.

ಕೆ.ಎಸ್. ನಿಸಾರ್ ಅಹಮದ್

ವಿಶ್ವಸಂಸ್ಥೆಯಲ್ಲಿ ವೀಟೋ ಅಧಿಕಾರವಿಲ್ಲದ ಶಾಶ್ವತ ಸದಸ್ಯತ್ವಕ್ಕೆ ಭಾರತ ವಿರೋಧ

ನೈಜ್ಯ ದೆಸೆ ನ್ಯೂಸ್

ವಿಶ್ವಸಂಸ್ಥೆ: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಧಾರಣೆಗಳನ್ನು ತರುವಾಗ, ವೀಟೋ (ನಿಷೇಧಾಧಿಕಾರ) ಇಲ್ಲದ ಹೊಸ ವರ್ಗದ ಶಾಶ್ವತ ಸದಸ್ಯರನ್ನು ಸೃಷ್ಟಿಸುವುದು ಅಂತಹ ಸದಸ್ಯರನ್ನು ದ್ವಿತೀಯ ದರ್ಜೆಯ ಸ್ಥಾನಮಾನಕ್ಕೆ ತಳ್ಳಿದಂತಾಗುತ್ತದೆ ಎಂದು ಭಾರತ ಪ್ರತಿಪಾದಿಸಿದೆ. ಹೀಗಾದಲ್ಲಿ, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಮೇಲಿನ ನಿಯಂತ್ರಣವು ಈಗಿರುವ ಐದು ಶಾಶ್ವತ ಸದಸ್ಯ ರಾಷ್ಟ್ರಗಳ ಕೈಯಲ್ಲೇ ಉಳಿಯುತ್ತದೆ.



15 ಸದಸ್ಯ ರಾಷ್ಟ್ರಗಳನ್ನು ಹೊಂದಿರುವ ಭದ್ರತಾ ಮಂಡಳಿಯಲ್ಲಿ ಚೀನಾ, ಫ್ರಾನ್ಸ್, ರಷ್ಯಾ, ಯುನೈಟೆಡ್ ಕಿಂಗ್‌ಡಮ್ (ಯುಕೆ) ಮತ್ತು ಅಮೆರಿಕ (ಯುಎಸ್) ಈ ಐದು ರಾಷ್ಟ್ರಗಳು ಶಾಶ್ವತ ಸದಸ್ಯರಾಗಿದ್ದು, ವೀಟೋ ಅಧಿಕಾರವನ್ನು ಹೊಂದಿವೆ. ಇದಲ್ಲದೆ, ಎರಡು ವರ್ಷಗಳ ಅವಧಿಗೆ ಆಯ್ಕೆಯಾಗುವ 10 ಅಶಾಶ್ವತ ಸದಸ್ಯ ರಾಷ್ಟ್ರಗಳು ಮಂಡಳಿಯಲ್ಲಿವೆ. ವಿಶ್ವಸಂಸ್ಥೆಯಲ್ಲಿ ಭಾರತದ ಶಾಶ್ವತ ಪ್ರತಿನಿಧಿ, ರಾಯಭಾರಿ ಹರೀಶ್ ಪರ್ವತನೇನಿ ಮಾತನಾಡಿ, ವೀಟೋ ಅಧಿಕಾರ ಅಸ್ತಿತ್ವದಲ್ಲಿರುವವರೆಗೂ ಸುಧಾರಿತ ಮಂಡಳಿಯ ಎಲ್ಲಾ ಶಾಶ್ವತ ಸದಸ್ಯರಿಗೂ ಈ ಅಧಿಕಾರ ಇರಬೇಕು ಎಂದು ಹೇಳಿದರು. ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಎಲ್ಲಾ ಶಾಶ್ವತ ಸದಸ್ಯರಿಗೆ ಸಮಾನ ಹಕ್ಕುಗಳು ಮತ್ತು ಜವಾಬ್ದಾರಿಗಳು ಇರಬೇಕೆಂದು ಅವರು ಒತ್ತಿ ಹೇಳಿದರು.

ವೀಟೋ ಅಧಿಕಾರದ ಕುರಿತು ಭಾರತದ ನಿಲುವು ತತ್ವಬದ್ಧವಾಗಿದೆ ಮತ್ತು ಎಲ್ಲರಿಗೂ ತಿಳಿದಿದೆ. ವೀಟೋ ಅಧಿಕಾರ ಇರುವವರೆಗೂ ಸುಧಾರಿತ ಮಂಡಳಿಯ ಎಲ್ಲಾ ಶಾಶ್ವತ ಸದಸ್ಯರಿಗೂ ಅದು ಲಭ್ಯವಿರಬೇಕು ಎಂಬುದನ್ನು ನಾವು ಪುನರುಚ್ಚರಿಸುತ್ತೇವೆ ಎಂದು ಅವರು ಹೇಳಿದರು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ವೀಟೋ ಅಧಿಕಾರದ ಕುರಿತ ಚರ್ಚೆಯ ಸಂದರ್ಭದಲ್ಲಿ ನಡೆದ ಅಂತರಸರ್ಕಾರಿ ಮಾತುಕತೆಗಳ (ಐಜಿಎನ್) ಸಮಾವೇಶದಲ್ಲಿ ಮಾತನಾಡಿದ ಪರ್ವತನೇನಿ, ವೀಟೋ ಅಧಿಕಾರವಿಲ್ಲದ ದೀರ್ಘಕಾಲೀನ ಸದಸ್ಯರ ಹೊಸ ವರ್ಗವನ್ನು ಸೃಷ್ಟಿಸುವ ಮೂಲಕ ಭದ್ರತಾ ಮಂಡಳಿಯನ್ನು ವಿಸ್ತರಿಸುವುದು ಅವರನ್ನು ದ್ವಿತೀಯ ದರ್ಜೆಯ ಸದಸ್ಯರನ್ನಾಗಿ ಮಾಡುತ್ತದೆ. ಇದರಿಂದ ಪಿ5 (ಐದು ಶಾಶ್ವತ ಸದಸ್ಯ ರಾಷ್ಟ್ರಗಳು) ಗುಂಪಿನ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂದು ಹೇಳಿದರು.

ವೀಟೋ ಅಧಿಕಾರವಿರಲಿ ಅಥವಾ ಇಲ್ಲದಿರಲಿ, ಶಾಶ್ವತ ಸದಸ್ಯರ ಹೊಸ ವರ್ಗವನ್ನು ಸೃಷ್ಟಿಸುವುದು ಈಗಾಗಲೇ ಜಟಿಲವಾಗಿರುವ ಚರ್ಚೆಯನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ ಮತ್ತು ನಾವು ಸರಿಪಡಿಸಲು ಪ್ರಯತ್ನಿಸುತ್ತಿರುವ ಅಸಮಾನತೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ ಎಂದು ಅವರು ಹೇಳಿದರು. ಕಾಲಕಾಲಕ್ಕೆ ನಡೆಯುವ ಚುನಾವಣೆಗಳು ಮತ್ತು ಶಾಶ್ವತ ಸದಸ್ಯತ್ವ ಎಂಬ ಪರಿಕಲ್ಪನೆಗಳು ಮೂಲಭೂತವಾಗಿ ಪರಸ್ಪರ ವಿರುದ್ಧವಾಗಿವೆ ಎಂದು ಈ ರಾಜತಾಂತ್ರಿಕರು ಹೇಳಿದರು. ಇತಿಹಾಸ ನಮಗೆ ಒಂದು ಪಾಠವನ್ನು ಕಲಿಸಿದೆ ಎಂದು ಹೇಳಿದ ಅವರು, 1965ರಲ್ಲಿ ಭದ್ರತಾ ಮಂಡಳಿಯನ್ನು ವಿಸ್ತರಿಸಿದಾಗ ಐದು ಶಾಶ್ವತ ಸದಸ್ಯರನ್ನು ಹಾಗೆಯೇ ಉಳಿಸಿಕೊಂಡು, ಅಶಾಶ್ವತ ಸದಸ್ಯರ ಸಂಖ್ಯೆಯನ್ನು ಆರರಿಂದ ಹತ್ತಕ್ಕೆ ಹೆಚ್ಚಿಸಲಾಯಿತು ಎಂಬುದನ್ನು ನೆನಪಿಸಿದರು.

ಕಂಪ್ಲಿ: ಶಾಲೆಯಲ್ಲಿ ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಮೂಡಿಸಿದ 'ಸುರಕ್ಷಿತ ಬಚ್ಚನ್ ಅಭಿಯಾನ'

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಇಲ್ಲಿನ ಸಮೀಪದ ಕೋಟೆಯ ಶ್ರೀ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ವಿದ್ಯಾರ್ಥಿನಿಯರಿಗಾಗಿ 'ಸುರಕ್ಷಿತ ಬಚ್ಚನ್ ಅಭಿಯಾನ' ಹಾಗೂ 'ಪೋಕ್ಸೋ ಆಕ್ಟ್-2012' (POCSO Act) ಜಾಗೃತಿ ಕಾರ್ಯಕ್ರಮವು ಇಂದು (ಮಂಗಳವಾರ) ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಶಾಲೆಯ ಮುಖ್ಯಗುರುಗಳಾದ ಬಿ. ಜಿಲಾನಸಾಬ್ ಅವರು, "ಮಕ್ಕಳ ರಕ್ಷಣೆ ಮತ್ತು ಸುರಕ್ಷತೆ ನಮ್ಮೆಲ್ಲರ ಆದ್ಯತೆಯಾಗಬೇಕು. ಪ್ರಸ್ತುತ ದಿನಗಳಲ್ಲಿ ಮಕ್ಕಳು ತಮ್ಮ ಹಕ್ಕುಗಳು ಮತ್ತು ಸುರಕ್ಷತಾ ಕಾಯ್ದೆಗಳ ಬಗ್ಗೆ ಅರಿವು ಹೊಂದುವುದು ಅತ್ಯಂತ ಅಗತ್ಯವಾಗಿದೆ" ಎಂದು ತಿಳಿಸಿದರು. ಅಲ್ಲದೆ, ಪೋಕ್ಸೋ ಕಾಯ್ದೆಯ ಮಹತ್ವ ಮತ್ತು ಸಂಕಷ್ಟದ ಸಮಯದಲ್ಲಿ ಮಕ್ಕಳು ಹೇಗೆ ಜಾಗರೂಕರಾಗಿರಬೇಕು ಎಂಬ ಬಗ್ಗೆ ವಿದ್ಯಾರ್ಥಿನಿಯರಿಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕಿಯರಾದ ಕೆ. ಶ್ವೇತಾ, ವರ್ಷಾ ಮಜುಮದಾರ, ಕೆ. ಜಯಶ್ರೀ, ಜೆ. ಅಕ್ಷತಾ, ಪಿ. ಅಮೃತಾ, ಡಿ. ಉಮಾದೇವಿ, ಮಠದ ಸುನೀತಾ, ಅಮ್ರಿನ ಹಾಗೂ ಆಯಾ ಶರ್ಮಸ್ ಬೀ ಸೇರಿದಂತೆ ಶಾಲೆಯ ನೂರಾರು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಕಲೆ– ಕಲಾವಿದರನ್ನು ಘೋಷಿಸಿದ ಸಿದ್ದನಕೊಳ್ಳದ ಶ್ರೀಮಠಕ್ಕೆ ರಾಜ್ಯೋತ್ಸವ ಪ್ರಶಸ್ತಿ ನೀಡಲು ನಾಗರತ್ನ ಹಳ್ಳೂರ ಆಗ್ರಹ

ನೈಜ್ಯ ದೆಸೆ ನ್ಯೂಸ್



ಇಳಕಲ್: ಉತ್ತರ ಕರ್ನಾಟಕದ ಪ್ರಸಿದ್ಧ ನಿರಂತರ ದಾಸೋಹ ಮಠವಾದ ಇಳಕಲ್ ತಾಲೂಕಿನ ಸಿದ್ದನಕೊಳ್ಳದ ಶ್ರೀ ಸಿದ್ದಪ್ಪಜ್ಜನ ಮಠವು ಹಲವು ದಶಕಗಳಿಂದ ಕಲೆ ಮತ್ತು ಕಲಾವಿದರನ್ನು ಘೋಷಿಸುತ್ತಾ ಬಂದಿದ್ದು, ಈ ಬಾರಿ ಮಠಕ್ಕೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕೆಂದು ಪತ್ರಕರ್ತರಾದ ನಾಗರತ್ನ ಹಳ್ಳೂರ ಅವರು ಆಗ್ರಹಿಸಿದ್ದಾರೆ.

ಕಂಪ್ಲಿ ಉಪ ನೋಂದಣಿ ಕಚೇರಿಗೆ ಶಾಸಕ ಜೆ.ಎನ್.ಗಣೇಶ್ ದಿಢೀರ್ ಭೇಟಿ: ನಕಲಿ ಹಾಜರಾತಿ, ಲಂಚಾವತಾರಕ್ಕೆ ಸಿಬ್ಬಂದಿಗೆ ತರಾಟೆ

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ತೀವ್ರ ಭ್ರಷ್ಟಾಚಾರ ಮತ್ತು ಸಾರ್ವಜನಿಕರ ಅಲೆದಾಟದ ದೂರುಗಳ ಹಿನ್ನೆಲೆಯಲ್ಲಿ ಕಂಪ್ಲಿ ಪಟ್ಟಣದ ಹಿರಿಯ ಉಪ ನೋಂದಣಾಧಿಕಾರಿಗಳ ಕಚೇರಿಗೆ ಶಾಸಕ ಜೆ. ಎನ್.ಗಣೇಶ್ ಮಂಗಳವಾರ ದಿಢೀರ್ ಭೇಟಿ ನೀಡಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಕಚೇರಿಯಲ್ಲಿ ಸರ್ಕಾರಿ ಶುಲ್ಕಕ್ಕಿಂತ ಅತಿ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಮತ್ತು ಸಾರ್ವಜನಿಕರನ್ನು ಸತಾಯಿಸುತ್ತಿರುವ ಕುರಿತು ಆಕ್ರೋಶ ಹೊರಹಾಕಿದ ಶಾಸಕರು, "ಜನರ ಕೆಲಸ ಮಾಡಲು ಸರ್ಕಾರ ಸಂಬಳ ನೀಡುತ್ತದೆ. ಅದನ್ನು ಬಿಟ್ಟು ಬಡವರ, ರೈತರ ರಕ್ತ ಹೀರುತ್ತಿದ್ದೀರಾ?" ಎಂದು ಗುಡುಗಿದರು. ಐದು ನಕಲಿ ಸಹಿ ಪತ್ತೆ: ಪರಿಶೀಲನೆ ವೇಳೆ ಕಚೇರಿಯ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಗಾದಿಲಿಂಗಪ್ಪ ಎಂಬುವವರು ಶಾಸಕರ ಕಣ್ಣೆದುರೇ ಹಾಜರಾತಿ ಪುಸ್ತಕದಲ್ಲಿ ಗೈರುಹಾಜರಾದ ಐದು ಸಿಬ್ಬಂದಿಗಳ ನಕಲಿ ಸಹಿ ಹಾಕಿ ಸಿಕ್ಕಿಬಿದ್ದರು.



ಈ ಅಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಶಾಸಕರು, ಗಾದಿಲಿಂಗಪ್ಪ ಅವರಿಗೆ ಸ್ಥಳದಲ್ಲೇ ನೋಟಿಸ್ ಜಾರಿಗೊಳಿಸಿ ಮುಂದಿನ ಕಾನೂನು ಕ್ರಮಕ್ಕೆ ನಿರ್ದೇಶನ ನೀಡಲಾಗುವುದು ಎಂದರು. ಇದೇ ವೇಳೆ ಕಚೇರಿಯಲ್ಲಿದ್ದ ಪತ್ರ ಬರಹಗಾರರನ್ನು ಕರೆದು, ಸಾರ್ವಜನಿಕರಿಂದ ನಿಗದಿತ ಶುಲ್ಕಕ್ಕಿಂತ ಹೆಚ್ಚು ಹಣ ವಸೂಲಿ ಮಾಡಿದರೆ ಪರವಾನಿಗೆ ರದ್ದುಪಡಿಸುವುದಾಗಿ ಎಚ್ಚರಿಸಿದರು.

ಹೆಚ್ಚು ಹಣ ಕೇಳಿದರೆ ಅರ್ಜಿ ಅಲ್ಲೇ ಬಿಡಿ: "ಪಹಣಿ ಬದಲಾವಣೆ, ದಾನಪತ್ರ, ನಿವೇಶನ ನೋಂದಣಿಗೆ ಅಧಿಕಾರಿಗಳು 20 ರಿಂದ 30 ಸಾವಿರ ರೂ. ಹೆಚ್ಚುವರಿ ಹಣ ಕೇಳಿದರೆ ಸಾರ್ವಜನಿಕರು ಹಾಗೂ ರೈತರು ಅರ್ಜಿಗಳನ್ನು ಅಲ್ಲೇ ಬಿಟ್ಟು ನೇರವಾಗಿ ನನ್ನನ್ನು ಸಂಪರ್ಕಿಸಬೇಕು. ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು" ಎಂದು ಶಾಸಕ ಜೆ.ಎನ್.ಗಣೇಶ್ ತಿಳಿಸಿದರು.

ಕಳಲೆ ಗ್ರಾಮದಲ್ಲಿ ನೆಸ್ಲೆ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸಿಎಸ್‌ಆರ್ (CSR) ನಿಧಿಯಡಿ ಒಟ್ಟು 4 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಭೂಮಿ ಪೂಜೆ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವಕಳಲೆ ಗ್ರಾಮದಲ್ಲಿ ನೆಸ್ಲೆ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸಿಎಸ್‌ಆರ್ (CSR) ನಿಧಿಯಡಿ ಒಟ್ಟು ?4 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಭೂಮಿ ಪೂಜೆ ನೆರವೇರಿಸಿದರು

ಬಳಿಕ ಮಾತನಾಡಿದ ಶಾಸಕರು ಸರ್ಕಾರಿ ಪ್ರೌಢಶಾಲೆಯಲ್ಲಿ ನೂತನ ತರಗತಿ ಕೊಠಡಿ ನಿರ್ಮಾಣ ಹಾಗೂ 7 ತರಗತಿ ಕೊಠಡಿಗಳ ನವೀಕರಣ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನ ಮತ್ತು ತರಗತಿ ಕೊಠಡಿ ನವೀಕರಣ, ಆರ್.ಓ. ಘಟಕದ ದುರಸ್ತಿ, ಕೊಳ ಮತ್ತು ಕಲ್ಯಾಣಿ ನವೀಕರಣ, ಘನತ್ಯಾಜ್ಯ ನಿರ್ವಹಣಾ ಘಟಕದ ಶೆಡ್ ನಿರ್ಮಾಣ ಹಾಗೂ ಅಂಗನವಾಡಿ ನವೀಕರಣ ಸೇರಿದಂತೆ ಹಲವು ಕಾಮಗಾರಿಗಳು ಈ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ. ಎಂದು ತಿಳಿಸಿದರು ನೆಸ್ಲೆ ಕಂಪನಿ ಅವರ ಈ ಅನುದಾನದಲ್ಲಿ ಉತ್ತಮವಾದ ಶಾಲಾ ಕಚಡವನ್ನು ನಿರ್ಮಿಸಲು ಸಂಬಂಧಪಟ್ಟ ಗುತ್ತಿಗೆದಾರರು ಉತ್ತಮ ಗುಣಮಟ್ಟದ ಕಾಮಗಾರಿಯನ್ನು ಕೈಗೊಂಡು ಆದಷ್ಟು ಬೇಗನೆ ಕಾಮುಗಾರಿ ಮುಗಿಸಿ ಶಾಲಾ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸೂಚನೆ ನೀಡಿದರು ಅಲ್ಲದೆ ಕಂಪನಿಯ ಈ ಸೇವೆಗೆ ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು ಇದೇ ರೀತಿ ಇನ್ನೂ ಹಲವಾರು ಶಾಲಾ ಕಟ್ಟಡಗಳು ಶಿಥಿಲ ವ್ಯವಸ್ಥೆಯಲ್ಲಿವೆ ಅದನ್ನು ಸಹ ಇದೇ ರೀತಿ ಇನ್ನು ಹೆಚ್ಚಿನ ಅನುದಾನ ನೀಡಿ ಶಾಲಾ ಕಟ್ಟಡಕ್ಕೆ ಮುಂದಾಗ ಬೇಕೆಂದು



ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ ರೋಡ್ರಿಗೋ, ಬಿಇಒ ಮಹೇಶ್, ಇಒ ಜೆರಾಲ್ಡ್ ರಾಜೇಶ್, ಸಿಡಿಪಿಒ ಭವ್ಯ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮಹೇಶ್, ನೆಸ್ಲೆ ಕಂಪನಿಯ ಆಡಳಿತ ವರ್ಗದವರು ನಾರಾಯಣ, ಕಳಲೆ ರಾಜೇಶ್, ಕೆ.ಡಿ. ಮಂಜು ಸೇರಿದಂತೆ ಹಲವು ಮುಖಂಡರು ಹಾಗೂ ಗ್ರಾಮಸ್ಥರು ಹಾಗೂ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರ ತವರಲ್ಲೇ ಕೈಗೆ ಹಿನ್ನಡೆ; ಕಮಲ ಕಲರವ ಮಸ್ಕಿಯಲ್ಲಿ ಬಿಜೆಪಿ ವಿಜಯೋತ್ಸವದ ಸಂಭ್ರಮ!

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಐದನೇ ಬಾರಿಗೆ ಗೆಲುವು ಸಾಧಿಸಿದ ಬಿಜೆಪಿ ಅಭ್ಯರ್ಥಿ ಶ್ರೀ ಶಶಿಲ್ ಜಿ. ನಮೋಶಿ ಅವರ ವಿಜಯದ ಹಿನ್ನೆಲೆಯಲ್ಲಿ ಮಸ್ಕಿ ಬಿಜೆಪಿ ಮಂಡಲದ ವತಿಯಿಂದ ನಗರದ ದೈವದ ಕಟ್ಟೆ ಸಮೀಪ ವಿಜಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಯಕರ್ತರು ಸಿಹಿ ಹಂಚಿಕೊಂಡು, ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು.

ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್ ಮಾತನಾಡಿ, ಶಶಿಲ್ ನಮೋಶಿ ಅವರ ಐದನೇ ಗೆಲುವು ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಜೆಪಿ ಸಂಘಟನೆಗೆ ಮತ್ತಷ್ಟು ಬಲ ತುಂಬಿದೆ. ಶಿಕ್ಷಕರು ಉತ್ತಮ ನಿರ್ಧಾರ ಕೈಗೊಂಡು ಸೂಕ್ತ ಶಿಕ್ಷಕ ಸಮುದಾಯವು ಅವರ ಮೇಲಿಟ್ಟಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.



ಕಲಬುರಗಿ ಜಿಲ್ಲೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ತವರು ಜಿಲ್ಲೆಯಾಗಿದ್ದರೂ, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿರುವುದು ಕಾಂಗ್ರೆಸ್‌ಗೆ ರಾಜಕೀಯ ಹಿನ್ನಡೆಯಾಗಿದೆ. ಮುಂಬರುವ ದಿನಗಳಲ್ಲಿ ರಾಜಕೀಯ ಬದಲಾವಣೆಯ ಪರ್ವ ಆರಂಭವಾಗುವ ನಿರೀಕ್ಷೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಿಕ್ಷಕರ ಹಿತಾಸಕ್ತಿಗಳ ರಕ್ಷಣೆ ಹಾಗೂ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಶಶಿಲ್ ನಮೋಶಿ ಅವರು ಇನ್ನಷ್ಟು ಶ್ರಮಿಸಲಿ ಎಂದು ಬಿಜೆಪಿ ಮುಖಂಡರು ಆಶಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಪುರಸಭೆ ಅಧ್ಯಕ್ಷ ಸುರೇಶ್ ಅರಸುರು, ಡಾ. ಬಿ.ಎಚ್. ದಿವಟರ್, ಪಂಪಣ್ಣ ಗುಂಡಳ್ಳಿ, ಪ್ರಸನ್ನ ಪಾಟೀಲ್, ಸೂಗಣ್ಣ ಬಾಳೆಕಾಯಿ, ರಮೇಶ್ ಉದ್ಬಾಳ್, ಬಸವರಾಜ್ ಪಾಟೀಲ್, ನಿವೇದಿತ ಬುಳ್ಳ, ಬಸವರಾಜ್ ಉದ್ಬಾಳ್, ಪುರಸಭೆ ಸದಸ್ಯರಾದ ಮಲ್ಲಿಕಾರ್ಜುನ ಬ್ಯಾಳಿ, ಮೌನೇಶ್ ಮುರಾರಿ, ಭರತ್ ಕುಮಾರ್, ಬಸವರಾಜ ಬುಕ್ಕಣ್ಣ, ರಾಮಣ್ಣ ಉದ್ಬಾಳ, ಮಲ್ಲಯ್ಯ ಕುರುಬರು, ಮಲ್ಲಿಕಾರ್ಜುನ ಗೋನಾಳ, ಅಮರೇಶ್, ಬಸವರಾಜ ಗೂಗ್ಲಿ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಾಹಿತ್ಯ ಸಿಂಚನ

ನಾಳೆ ನನ್ನದಾಗಲಿ

ನಿನ್ನೆಯ ನೋವು ಮರೆತು ಇಂದು ನಗುವಾಗಲಿ,
ನಾಳೆಯ ಕನಸು ನನಸಾಗುವ ಹಾದಿಯಾಗಲಿ.
ಕತ್ತಲೆಯ ದಾರಿಯಲ್ಲಿ ಬೆಳಕೊಂದು ಮೂಡಲಿ,
ಕಳೆದುಹೋದ ಸಂತೋಷ ಮತ್ತೆ ಮರಳಿ ಬರಲಿ.

ಸೋಲಿನ ಹೆಜ್ಜೆಯಲ್ಲೂ ಗೆಲುವಿನ ಪಾಠವಿರಲಿ,
ಬಿದ್ದಾಗ ಎದ್ದು ನಿಲ್ಲುವ ಧೈರ್ಯ ಮನದೊಳಗಿರಲಿ.
ಕಣ್ಣೀರ ಹನಿಯಲ್ಲೂ ಹೊಸ ಆಸೆ ಅರಳಲಿ,
ಮೌನದ ಹೃದಯದಲ್ಲಿ ಸಾವಿರ ಹಾಡು ಮೊಳಗಲಿ.

ನನ್ನ ಕನಸುಗಳಿಗೆ ರೆಕ್ಕೆಗಳು ಮೂಡಲಿ,
ನನ್ನ ಗುರಿಗಳಿಗೆ ಹೊಸ ದಾರಿಗಳು ತೆರೆಯಲಿ.
ಕಾಲದ ಪರೀಕ್ಷೆಯಲ್ಲಿ ನನ್ನ ನಂಬಿಕೆ ಗೆಲ್ಲಲಿ,
ವಿಧಿಯ ತಿರುವಿನಲ್ಲೂ ನನ್ನ ಪ್ರಯತ್ನ ಫಲಿಸಲಿ.

ನನ್ನ ಹೆಜ್ಜೆಗಳು ಯಶಸ್ಸಿನತ್ತ ಸಾಗಲಿ,
ನನ್ನ ಬದುಕು ಪ್ರೀತಿಯ ಹೂವಿನಂತೆ ಅರಳಲಿ.
ನನ್ನ ಮಾತುಗಳಲ್ಲಿ ನಂಬಿಕೆಯ ಬೆಳಕಿರಲಿ,
ನನ್ನ ಕರ್ಮದಲ್ಲಿ ಮಾನವೀಯತೆಯ ಸೆಲೆಯಿರಲಿ.

ನಿನ್ನೆ ಕಳೆದಿದೆ, ಇಂದು ಹೊಸ ಆರಂಭವಾಗಲಿ,
ನಾಳೆಯ ಕನಸುಗಳಿಗೆ ಹೊಸ ರೂಪ ಸಿಗಲಿ.
ಬದುಕಿನ ಪ್ರತಿಕ್ಷಣವೂ ಸಾರ್ಥಕವಾಗಲಿ,
ಬರುವ ನಾಳೆ ಸಂಪೂರ್ಣ ನನ್ನದಾಗಲಿ!

ಎಸ್ ಟಿ ಜಾತಿ ಹೆಸರಲ್ಲಿ ಅನ್ಯ ಜಾತಿಯವರು ನಕಲು ಪ್ರಮಾಣ ಪತ್ರ ತಡೆಯಲು ಆಗ್ರಹಿಸಿ ಮನವಿ ಪತ್ರ

❏ ನೈಜ್ಯ ದೆಸೆ ನ್ಯೂಸ್

ಮಸ್ಕಿ: ವಾಲ್ಮೀಕಿ ನಾಯಕ ಸಮಾಜದ ವಿವಿಧ ಬೇಡಿಕೆಗೆ ಆಗ್ರಹಿಸಿ ಶ್ರೀ ವಾಲ್ಮೀಕಿ ವೃತ್ತದಲ್ಲಿ ಶ್ರೀ ಆತ್ಮಾನಂದ ಸ್ವಾಮೀಜಿ ಉಸ್ಕಿಹಾಳ ಹಾಗೂ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಚಂದ್ರಶೇಖರ ನಾಯಕ ಉದ್ಬಾಳ ಮತ್ತು ಸಮಾಜದ ಬಾಂಧವ-ರಿಂದ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವ ಪರಿಶಿಷ್ಟ ಪಂಗಡ ಜನಾಂಗದ ಮೀಸಲಾತಿ ಗೊಂದಲ ವಿಚಾರವಾಗಿ ಆಗುತ್ತಿರುವ ಅನ್ಯಾಯದ ವಿರುದ್ಧ ಮತ್ತು ಬುಡಕಟ್ಟು ಜನಾಂಗದ ಅಭಿವೃದ್ಧಿಗಾಗಿ ವಿಶ್ವವಿದ್ಯಾಲಯದ ಸ್ಥಾಪಿಸುವುದು, ನಾಯಕ ಜನಾಂಗದ ಹೆಸರಿನಲ್ಲಿ ನಕಲು ಜಾತಿ ಪ್ರಮಾಣ



ಪತ್ರ ಹಾವಳಿ ಮಿತಿಮೀರಿದ್ದು ವಿಶೇಷವಾಗಿ ಬೀದರ್, ಕಲ್ಬುರ್ಗಿ, ಯಾದಗಿರಿ, ಮಸ್ಕಿ, ಬಿಜಾಪುರ ಇನ್ನಿತರ ಜಿಲ್ಲೆಗಳಲ್ಲಿ ನಾಯಕ ಜಾತಿ ಹೆಸರಿನಲ್ಲಿ ಕೂಲಿ, ಕಬ್ಬಲಿಗ, ಕಬ್ಬೇರ, ಗಂಗಾಮತ, ಅಂಬಿಗ ಇನ್ನಿತರರು ಸೇರಿದಂತೆ ನಾಯಕ ಎಸ್ ಟಿ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಪಡೆಯುತ್ತಿದ್ದು ಇದು ತೀವ್ರ ಅನ್ಯಾಯ, ಅದಕ್ಕೆ ಸರ್ಕಾರ ಈ ಕೂಡಲೇ ಕಟ್ಟು ನಿಟ್ಟಿನ ಕ್ರಮಕೈಗೊಂಡು ಅಹ9 ಪರಿಶಿಷ್ಟ ಪಂಗಡ ಜನಾಂಗಕ್ಕೆ ಸೇರಿದವರಿಗೆ ಮಾತ್ರ ಜಾತಿ ಪ್ರಮಾಣ ಪತ್ರ ನೀಡಬೇಕೆಂದು ತಹಸೀಲ್ದಾರರ ಮೂಲಕ ಮಾನ್ಯ ಮುಖ್ಯಮಂತ್ರಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು . ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಗೋವಿಂದಪ್ಪ ನಾಯಕ ರಂಗಾಪೂರ, ಶಿವಣ್ಣ ನಾಯಕ ಮಾಜಿ ತಾಲೂಕ ಪಂಚಾಯತಿ ಅಧ್ಯಕ್ಷ, ರಮೇಶ ನಾಯಕ ತೀರ್ಥಬಾವಿ, ವೆಂಕಟೇಶ ನಾಯಕ ಕೋಳಬಾಳ, ಯಮನೂರು ನಾಯಕ ಬುದ್ದಿನಿ, ಶರಣಬಸವ ನಾಯಕ ಮಸ್ಕಿ, ಬಿ ಜಿ ನಾಯಕ ಕಾಟಗಲ್, ದೊಡ್ಡ ಜಕ್ಕಪ್ಪ ನಾಯಕ, ದೇವಣ್ಣ ನಾಯಕ ಹಂಪನಾಳ ಹಾಗೂ ಇನ್ನಿತರರು ಇದ್ದರು.

ದೇಶಪ್ರೇಮ, ಚೆನ್ನಮ್ಮನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಅಮರೇಗೌಡ ಪೊಲೀಸ್ ಪಾಟೀಲ್

❏ ನೈಜ್ಯ ದೆಸೆ ನ್ಯೂಸ್

ತಾವರಗೇರಾ: ಸಮೀಪದ ನವಲಹಳ್ಳಿ ಗ್ರಾಮದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ಹಾಗೂ ವಿವಿಧ ಸಮುದಾಯಗಳ ನೇತೃತ್ವದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಅಂಗವಾಗಿ ಕಿತ್ತೂರು ರಾಣಿ ಚೆನ್ನಮ್ಮಳ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು.

ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಹಿರಿಯ ನ್ಯಾಯವಾದಿ ಅಮರೇಗೌಡ ಪೊಲೀಸ್ ಪಾಟೀಲ್, "ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣತ್ಯಾಗ ಮಾಡಿದ ವೀರ ಮಹಿಳೆ. ಅವರ ದೇಶಪ್ರೇಮ, ಧೈರ್ಯ ಹಾಗೂ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಇಂತಹ ಅದ್ದೂರಿ ಜಯಂತಿ ಆಚ-ರಣೆಗೆ ನಿಜವಾದ ಅರ್ಥ ಬರುತ್ತದೆ" ಎಂದರು.

ಕಿತ್ತೂರು ರಾಣಿ ಚೆನ್ನಮ್ಮ ಅವರು ತಮ್ಮ ಆಡಳಿತದ ವ್ಯಾಪ್ತಿಯಲ್ಲಿ ಎಲ್ಲ ಧರ್ಮದ ಜನರನ್ನು ಸಹೋದರತ್ವದಿಂದ ಕಾಣುತ್ತಿದ್ದರು. ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣವೇ ಕುಟುಂಬದ ನಿಜವಾದ ಶಕ್ತಿ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಆದ್ಯತೆ ನೀಡಬೇಕು. ಯುವಕರು ಮತ್ತು ಹಿರಿಯರ ಸಹಕಾರದಿಂದ ಜಯಂತಿಯನ್ನು ಅಭೂತಪೂರ್ವವಾಗಿ ಆಚರಿಸಿರುವುದು ಸಂತೋಷದ ಸಂಗತಿ ಎಂದು ಹೇಳಿದರು. ನಂತರ ಹಿರಿಯ ಪತ್ರಕರ್ತ ಪ್ರಸನ್ನಕುಮಾರ ದೇಸಾಯಿ, ನ್ಯಾಯವಾದಿ ಬಸವರಾಜ ಬಂಡೇರ್ ಹಾಗೂ ನ್ಯಾಯವಾದಿ ಮಹಾಂತೇಶ ಬಂಡೇರ್ ಅವರು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚ-ರಣೆಯ ಮಹತ್ವದ ಕುರಿತು ಮಾತನಾಡಿದರು.

ಭವ್ಯ ಮೆರವಣಿಗೆ ಗ್ರಾಮದ ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ ಆರಂಭವಾದ ಕಿತ್ತೂರು ರಾಣಿ ಚೆನ್ನಮ್ಮಳ ಭಾವಚಿತ್ರದ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕಿತ್ತೂರು ರಾಣಿ ಚೆನ್ನಮ್ಮ ವೃತ್ತವನ್ನು ತಲುಪಿತು. ಮೆರವಣಿಗೆಯ



ಮಾರ್ಗದುದ್ದಕ್ಕೂ ವಿವಿಧ ಸಮುದಾಯಗಳ ಮಹಿಳೆಯರು ಸುಂದರವಾದ ರಂಗೋಲಿಗಳನ್ನು ಹಾಕಿ ಸಂಭ್ರಮಕ್ಕೆ ಮೆರುಗು ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಸಮುದಾಯಗಳ ಹಿರಿಯರು, ಮಹಿಳೆಯರು, ಯುವಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅಮರೇಗೌಡ ಸಿ. ಪಾಟೀಲ್, ದೊಡ್ಡನಗೌಡ ಜಿ. ಪಾಟೀಲ್, ಶಂಕ್ರಪ್ಪ ಗೆದಿಗೇರಿ, ಪರಸಪ್ಪ ಚಿಟಗಿ, ಪರಸಪ್ಪ ಕನಕಗಿರಿ, ಅಶೋಕ ಮ್ಯಾದರಡೊಕ್ಕಿ, ಶರಣಬಸವರಾಜ ಸಿ. ಪಾಟೀಲ್, ಬಸವರಾಜ ಬಂಡೇರ್, ಶರಣಪ್ಪ ಬುಕ್ಕಣ್ಣ, ಬಸವರಾಜ ಮ್ಯಾದರಡೊಕ್ಕಿ, ನಿಂಗಪ್ಪ ಬಾರಕೇರ, ದುರಗೇಶ, ಹುಸೇನಸಾಬ, ಸಂಗಯ್ಯ ಹಿರೇಮಠ, ಬಸವರಾಜ ವಪಾ, ಮಲ್ಲಿಕಾರ್ಜುನ ಸೇರಿದಂತೆ ಪಂಚಮಸಾಲಿ ಸಮಾಜದ ಹಿರಿಯರು ಹಾಗೂ ವಿವಿಧ ಸಮಾಜಗಳ ಪ್ರಮುಖರು ಉಪಸ್ಥಿತರಿದ್ದರು.

ಉದ್ದೇಶಿಸಿತ ಕವಿತಾಳ ಬಂದ್ ಕರೆ ತಾತ್ಕಾಲಿಕ ಮುಂದೂಡಿಕೆ

❏ ನೈಜ್ಯ ದೆಸೆ ನ್ಯೂಸ್

ಕವಿತಾಳ: ತ್ರಯಂಬಕೇಶ್ವರ ದೇವಸ್ಥಾನದ ಜಾಗದಲ್ಲಿ ಹಕ್ಕು ಪತ್ರ ವಿತರಣೆ ವಿರೋಧಿಸಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕವಿತಾಳ ಬಂದ್ ಕರೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.



ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್. ಬೋಸರಾಜು ಅವರು ಈ ವಿಷಯದ ಬಗ್ಗೆ ಜಿಲ್ಲಾಧಿಕಾ-ರಿಗಳ ಜೊತೆ ಚರ್ಚಿಸಿದ್ದು, ಅಧಿಕಾರಿಗಳು ಕ್ರಮದ ಭರವಸೆ ನೀಡಿದ್ದಾರೆ. ಎನ್. ಎಸ್. ಭೋಸರಾಜು ಅವರ ನಿರ್ದೇಶನದಂತೆ ದೇವಸ್ಥಾನದ ಸಮಿತಿ ಮತ್ತು ವಿವಿಧ ಸಂಘಟನೆಗಳ ಮುಖಂಡರ ನಿಯೋಗ ತೆರಳಿ ಜಿಲ್ಲಾಧಿಕಾ-ರಿಗಳೊಂದಿಗೆ ಚರ್ಚಿಸಲು ಅವಕಾಶ ಕಲ್ಪಿಸಿದ್ದಾರೆ. ಎನ್. ಎಸ್. ಭೋಸರಾಜು ಅವರ ಸೂಚನೆಯಂತೆ ಕವಿತಾಳ ಬಂದ್ ಕರೆ ಮುಂದೂಡಲಾಗಿದೆ. ಬೇಡಿಕೆ ಈಡೇರದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲು ತೀರ್ಮಾನಿಸಲಾಗಿದೆ. ಕವಿತಾಳ ಬಂದ್ ಮುಂದೂಡಲಾಗಿದ್ದು ವರ್ತಕರು ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ತೆರೆದು ವ್ಯವಹ-ರಿಸಬಹುದು, ವಾರದ ಸಂತೆ ಎಂದಿನಂತೆ ನಡೆಯುತ್ತದೆ ಎಂದು ತ್ರಯಂಬಕೇಶ್ವರ ದೇವಸ್ಥಾನ ಸೇವಾ ಸಮಿತಿಯ ಅಧ್ಯಕ್ಷ ಗಂಗಪ್ಪ ದಿನ್ನಿ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಮಿತಿಯ ಪದಾಧಿಕಾರಿಗಳಾದ ಅಲ್ಲಮಪ್ರಭು, ಕಿರಿಲಿಂಗಪ್ಪ ಶೇಖರಪ್ಪ ಸಾಹುಕಾರ್, ಚಂದ್ರಶೇಖರ ಗೌಡ, ಈರಣ್ಣ ಕೆಳಗೇರಿ ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ನಿವಾಸಿಗಳ ನೆಮ್ಮದಿ ಕೆಡಿಸಿದ ಅಕ್ರಮ ಡೈರಿ ಫಾರಂ: ಕ್ರಮಕ್ಕೆ ಆಗ್ರಹಿಸಿ ಪಿಡಿಒಗೆ ಸಮಾಜ ಸೇವಾ ಕಾರ್ಯಕರ್ತರ ವೇದಿಕೆ ಮನವಿ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ವಸತಿ ಪ್ರದೇಶದಲ್ಲಿ ಅಕ್ರಮ ಹಾಗೂ ಅನಧಿಕೃತವಾಗಿ ನಡೆಸಲಾಗುತ್ತಿರುವ ವಾಣಿಜ್ಯ ಉದ್ದೇಶದ ದನಕರುಗಳ ಫಾರಂ (ಡೈರಿ ಫಾರಂ) ಅನ್ನು ತಕ್ಷಣವೇ ತೆರವುಗೊಳಿಸಿ, ಸಾರ್ವಜನಿಕರ ಆರೋಗ್ಯ ರಕ್ಷಿಸಬೇಕೆಂದು ಆಗ್ರಹಿಸಿ ಸಮಾಜ ಸೇವಾ ಕಾರ್ಯಕರ್ತರ ವೇದಿಕೆ (ರಿ.) ವತಿಯಿಂದ ಪಂಚಾಯತಿ ಅಭಿವೃದ್ಧಿ ಅಧಿಕಾ-ರಿಗಳಿಗೆ (PDO) ಅಧಿಕೃತ ದೂರು ಸಲ್ಲಿಸಲಾಗಿದೆ.

ತಾಲೂಕಿನ ನಂ 10. ಮುದ್ದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ 2ನೇ ವಾರ್ಡಿನ ಪ್ರಭು ಕ್ಯಾಂಪಿನ ವಸತಿ ಪ್ರದೇಶದಲ್ಲಿ ಈ ಅಕ್ರಮ ಡೈರಿ ಫಾರಂ ಕಾರ್ಯಾಚ-ರಿಸುತ್ತಿದ್ದು, ಸುತ್ತಮುತ್ತಲಿನ ನಿವಾಸಿಗಳು ತೀವ್ರ



ತೊಂದರೆ ಅನುಭವಿಸುತ್ತಿದ್ದಾರೆ. ಫಾರಂನಿಂದ ಹೊರಬರುತ್ತಿರುವ ಅತಿಯಾದ ದುರ್ವಾಸನೆ, ಸೊಳ್ಳೆ ಹಾಗೂ ನೊಣಗಳ ಕಾಟದಿಂದಾಗಿ ಇಡೀ ಪ್ರದೇಶ ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿದೆ. ದನಕರುಗಳ ತ್ಯಾಜ್ಯವನ್ನು (ಸಗಣಿ ಮತ್ತು ಮೂತ್ರ) ಸಮರ್ಪಕವಾಗಿ ವಿಲೇವಾರಿ ಮಾಡದೆ ರಸ್ತೆಯ ಪಕ್ಕದಲಿ ಈ ಅಕ್ರಮ ಡೈರಿ ಫಾರಂನಿಂದ ಕೇವಲ 40 ಮೀಟರ್ ಅಂತರದಲ್ಲೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು, ಸುಮಾರು 50 ರಿಂದ 60 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಫಾರಂನ ಕೊಳಕು ವಾತಾವರಣವು ಶಾಲಾ ಮಕ್ಕಳು, ಶಿಕ್ಷಕರು ಹಾಗೂ ವೃದ್ಧರ ಆರೋಗ್ಯದ ಮೇಲೆ ತೀವ್ರ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಸತಿ ವಲಯದಲ್ಲಿ ಇಂತಹ ವಾಣಿಜ್ಯ ಡೈರಿ ಫಾರಂ ನಡೆಸುವುದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿ ಕಾನೂನುಬಾಹಿರವಾಗಿದೆ. ಆದ-ರಿಂದ ಪಂಚಾಯತಿ ಅಭಿವೃದ್ಧಿ ಅಧಿಕಾ-ರಿಗಳು ತಕ್ಷಣವೇ ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕ ನೆಮ್ಮದಿಗೆ ಭಂಗ ತರುತ್ತಿರುವ ಫಾರಂ ಮಾಲೀಕರ ವಿರುದ್ಧ ಬಿ ಎನ್ ಎಸ್ ಅಥವಾ ಸಿಆರ್‌ಪಿಎಸ್ ಸೆಕ್ಷನ್ 133 ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವೇದಿಕೆಯ ಪದಾಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು ಜಂಟಿಯಾಗಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಸಮಾಜ ಸೇವಾ ಕಾರ್ಯಕರ್ತರ ರಾಜ್ಯ ಕಾರ್ಯಾಧ್ಯಕ್ಷ ಟಿ.ಹೆಚ್.ಎಂ. ರಾಜಕುಮಾರ್, ಸ್ಥಳೀಯ ನಿವಾಸಿಗಳಾದ ಶಂಕ್ರಮ್ಮ, ತಿಪ್ಪಮ್ಮ ಮಾರುತಿ, ರುದ್ರಪ್ಪ, ಜಿ. ಗೋವಿಂದ, ರಂಗಮ್ಮ, ಕೆ. ರುಕ್ಮಣ್ಣಮ್ಮ, ವಿನೋದ್, ತಿಮಪ್ಪ, ಆರೋಗ್ಯಮ್ಮ, ರವಿ. ಹೆಚ್.ಗೋಪಾಲ ಸೇರಿದಂತೆ ಇತರರಿದ್ದರು.

ರಾಜ್ಯಾದ್ಯಂತ "ಸ್ವಚ್ಛತೆಯೇ ಸೇವೆ 2026" ಅಭಿಯಾನದ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಕುರಿತು ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆ ನಡೆಸಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ರಾಜ್ಯಾದ್ಯಂತ "ಸ್ವಚ್ಛತೆಯೇ ಸೇವೆ 2026" ಅಭಿಯಾನದ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಕುರಿತು ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ನಡೆಸಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ನಗರ ಅಭಿವೃದ್ಧಿ ಸಚಿವರು ಆದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಅಧಿಕಾರ ಜೊತೆ ಮಹತ್ವದ ಚರ್ಚೆ ನಡೆಸಿದರು

ಗೃಹ ಕಚೇರಿಯಲ್ಲಿ ನಡೆಸಿದೆ. ಇಂದು ಗೃಹಕಚೇರಿಯಲ್ಲಿ ನಡೆಸಿದ ಈ ಸಭೆಯಲ್ಲಿ ಸಚಿವರು ಅಧಿಕಾರಗಳೊಂದಿಗೆ ಮಾತನಾಡುತ್ತಾ ಅಭಿಯಾನದ ಮೂಲಕ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕರು, ಯುವಜನರು ಹಾಗೂ ವಿದ್ಯಾರ್ಥಿಗಳ ಸಕ್ರಿಯ ಸಹಭಾಗಿ-ತ್ವದೊಂದಿಗೆ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ತ್ಯಾಜ್ಯ ನಿರ್ವಹಣೆ, ಸಫಾಯಿ ಮಿತ್ರರ ಸುರಕ್ಷತೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಆದ-



ತೆ ನೀಡಲಾಗಿದ್ದು, ಈ ಮೂಲಕ ಸ್ವಚ್ಛ, ಸುಂದರ ಹಾಗೂ ಆರೋಗ್ಯಕರ ನಗರಗಳನ್ನು ನಿರ್ಮಿಸಲು ಸಾರ್ವಜನಿಕರ ಸಹಭಾಗಿತ್ವವನ್ನು ಅಪೇಕ್ಷಿಸಲಾಗಿದೆ. ಎಂದು ಹೇಳಿದರು ವಿಶೇಷ ಹೆಮ್ಮೆಯ ವಿಷಯವೆಂದರೆ, 2025ರ "ಸ್ವಚ್ಛತೆಯೇ ಸೇವೆ" ಅಭಿಯಾನದಲ್ಲಿ ಕರ್ನಾಟಕ ರಾಜ್ಯವು ರಾಷ್ಟ್ರಮಟ್ಟದಲ್ಲಿ 5ನೇ ಸ್ಥಾನ ಗಳಿಸಿತ್ತು. ಈ ಬಾರಿ ಸಾರ್ವಜನಿಕರ ಸಹಕಾರ ಮತ್ತು ಅಧಿಕಾ-ರಿಗಳ ನಿರಂತರ ಪರಿಶ್ರಮದೊಂದಿಗೆ 2026ರಲ್ಲಿ ಇನ್ನೂ ಉತ್ತಮ ಸಾಧನೆ ಮಾಡುವ ವಿಶ್ವಾಸವಿದೆ. ಎಂದು ಸಚಿವರು ಭರವಸೆ ವ್ಯಕ್ತಪಡಿಸಿದ್ದರು ಇದೇ ಸಂದರ್ಭದಲ್ಲಿ 'ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ (ಹಂತ-2)ಯ 9 ನೇ ರಾಜ್ಯ ಮಟ್ಟದ ಸಮಿತಿ ಸಭೆ ನಡೆಸಿದೆ. ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯ ಹಂತ-2 ರಡಿ ಬೀದರ್ ಹಾಗೂ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆ ಕುರಿತು ವಿಸ್ತೃತವಾಗಿ ಚರ್ಚಿಸಿ, ಅಗತ್ಯ ಸಲಹೆ, ಸೂಚನೆಗಳನ್ನು ನೀಡಿದ ಸಚಿವರು ನಗರಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಗುಣಮಟ್ಟದ ಅಭಿವೃದ್ಧಿ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಅಧಿಕಾರಿಗಳಿಗೆ ಕಡಕ್ ನಿರ್ದೇಶನ ಮತ್ತು ಸೂಚನೆ ನೀಡಿದರು

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಾದ ಶ್ರೀಮತಿ ಬಿ. ಬಿ. ಕಾವೇರಿ, ವಿಶೇಷ ಅಧಿಕಾರಿ ವಿಜಯಕುಮಾರ್ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಾದ ಪಿ ಎನ್ ರವೀಂದ್ರ, ಮುಖ್ಯ ಅಭಿಯಂತರರಾದ ಪುರುಷೋತ್ತಮ ದಾಸ್ ಹೆಗ್ಗಡೆ, ನಗರಾಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಮಾಧುರಿ ತವಾಗ್, ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರಾದ ಶ್ರೀಮತಿ ತುಷಾರ್ ಮಣಿ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಮುಂತಾದವರು ಈ ಸಭೆಯಲ್ಲಿ ಭಾಗಿಯಾಗಿದ್ದರು

ಆಧುನಿಕ ಭಾರತಕ್ಕೆ ಪ್ರಧಾನಿ ಮೋದಿ ಕೊಡುಗೆ ಅಪಾರ : ಕ್ರಿಕೆಟಿಗ ಕೆವಿನ್ ಪೀಟರ್ಸನ್

❏ ನೈಜ್ಯ ದೆಸೆ ನ್ಯೂಸ್

ಲಂಡನ್: ಕಳೆದ ಎರಡು ವರ್ಷಗಳಲ್ಲಿ ಭಾರತ ಸಾಕಷ್ಟು ಬದಲಾವಣೆ ಕಂಡಿದೆ. ಈ ಯಶಸ್ಸಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕೊಡುಗೆ ಕಾರಣ ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಕೆವಿನ್ ಪೀಟರ್ಸನ್ ಅಭಿಪ್ರಾಯಪಟ್ಟಿದ್ದಾರೆ. ಪತ್ರಿಕೆಯೊಂದರ ಲೇಖನದಲ್ಲಿ ಅವರು 2003ರಿಂದ ಭಾರತದೊಂದಿಗಿನ ತಮ್ಮ ಒಡನಾಟವನ್ನು ಸರಿಸಿಕೊಂಡಿದ್ದಾರೆ. ಕ್ರೀಡೆ, ಮೂಲಸೌಕರ್ಯ, ತಂತ್ರಜ್ಞಾನ ಮತ್ತು ವನ್ಯಜೀವಿಗಳ ಸಂರಕ್ಷಣೆ ಸೇ-ರಿದಂತೆ ಹಲವು ಕ್ಷೇತ್ರಗಳಲ್ಲಿ ದೇಶದಲ್ಲಿ ಆಗಿರುವ ಬದಲಾವಣೆಗಳಿಗೆ ಪ್ರಧಾನಿ ಮೋದಿ ಅವರ ನಾಯಕತ್ವವೂ ಕೊಡುಗೆ ನೀಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಾನು ಮೊದಲ ಬಾರಿಗೆ 2003ರಲ್ಲಿ ಭಾರತಕ್ಕೆ ಬಂದಿದ್ದೆ. ಆಗ ನರೇಂದ್ರ ಮೋದಿ ಅವರ ಬಗ್ಗೆ ನನಗೆ ಹೆಚ್ಚು ತಿಳಿದಿರಲಿಲ್ಲ. ಆದರೆ ಅವರು ಆಗಲೇ ಗುಜರಾತ್‌ನ ಮುಖ್ಯಮಂತ್ರಿಯಾಗಿ ಎರಡು ವರ್ಷಗಳನ್ನು ಪೂರೈಸಿದ್ದರು. ಇದೀಗ ಅವರು ಸರ್ಕಾರದ ಮುಖ್ಯಸ್ಥರಾಗಿ 25 ವರ್ಷಗಳನ್ನು ಪೂರೈಸಿದ್ದಾರೆ ಎಂಬ ವಿಚಾರ ಕೇಳಿದಾಗ ನನಗೆ ಅಚ್ಚರಿಯಾಯಿತು. ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಷ್ಟು ದೀರ್ಘಕಾಲ ಅಧಿಕಾರದಲ್ಲಿರುವುದು ದೊಡ್ಡ ಸಾಧನೆಯೇ ಸರಿ ಎಂದಿದ್ದಾರೆ.ಇನ್ನು ಮೋದಿ ಅವರ ರಾಜಕೀಯ ಪಯಣವನ್ನು ಕ್ರಿಕೆಟ್‌ನ ಸುದೀರ್ಘ ಇನ್ನಿಂಗ್?ಸಗೆ ಹೋಲಿಸಿರುವ ಅವರು, 2014ರಲ್ಲಿ ಮೋದಿ ಪ್ರಧಾನಿಯಾದ ಬಳಿಕ ಬ್ರಿಟನ್‌ನಲ್ಲಿ ಆರು ಮಂದಿ ಪ್ರಧಾನಮಂತ್ರಿಗಳು ಬದಲಾಗಿದ್ದಾರೆ.

ಭಾರತಕ್ಕೆ ಆಗಾಗ್ಗೆ ಭೇಟಿ ನೀಡುತ್ತಿದ್ದ ಕಾರಣ, ದೇಶದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಹತ್ತಿರದಿಂದ ಗಮನಿಸಲು ಸಾಧ್ಯವಾಗಿದೆ. ಭಾರತೀಯರಲ್ಲಿ, ವಿಶೇಷವಾಗಿ ಯುವಜನರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸ್ಪರ್ಧಿಗಳೊಂದಿಗೆ ಪೈಪೋಟಿ ನಡೆಸಬಲ್ಲೆವು ಎಂಬ ನಂಬಿಕೆ ಯುವಕರಲ್ಲಿ ಬೆಳೆದಿದೆ. ತಾವು ಗಮನಿಸಿರುವ ಈ ಬದಲಾವಣೆಗೆ ಪ್ರಧಾನಿ ಮೋದಿ ಅವರ ನಾಯಕತ್ವ ಮತ್ತು ದೊಡ್ಡ ಗುರಿಗಳನ್ನು



ಸಾಧಿಸುವ ಮನೋಭಾವವೂ ಕಾರಣವಾಗಿದೆ ಎಂದು ಪೀಟರ್ಸನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹಿಂದೆ ಭಾರತೀಯ ಕ್ರಿಕೆಟ್ ತಂಡದ ಯಶಸ್ಸು ಕೆಲವೇ ಕೆಲವು ಆಟಗಾರರನ್ನು ಹೆಚ್ಚು ಅವಲಂಬಿಸಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ತಂಡದಲ್ಲಿ ಪ್ರತಿಭಾವಂತ ಆಟಗಾರರ ಸಂಖ್ಯೆ ಹೆಚ್ಚಾಗಿದೆ. ಯುವ ಆಟಗಾರರು ಹೆಚ್ಚಿನ ಆತ್ಮವಿಶ್ವಾಸ ಮತ್ತು ಉತ್ತಮ ಸಿದ್ಧತೆಯೊಂದಿಗೆ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಡುತ್ತಿದ್ದಾರೆ. ಇತ್ತ ಮಹಿಳಾ ಕ್ರಿಕೆಟ್‌ನಲ್ಲಿ ಭಾರತ ಸಾಧಿಸುತ್ತಿರುವ ಯಶಸ್ಸು ಜಾಗತಿಕ ಮಟ್ಟದಲ್ಲಿ ಈ ಕ್ರೀಡೆಯ ಬೆಳವಣಿಗೆಗೆ ನೆರವಾಗುತ್ತಿದೆ ಎಂದಿದ್ದಾರೆ.

ಅಥ್ಲೆಟಿಕ್ಸ್, ಶೂಟಿಂಗ್, ಕುಸ್ತಿ, ಬಾಕ್ಸಿಂಗ್, ಬ್ಯಾಡ್ಮಿಂಟನ್ ಮತ್ತು ಹಾಕಿ ಸೇರಿದಂತೆ ಹಲವು ಕ್ರೀಡೆಗಳಲ್ಲಿ ಭಾರತದ ಸಾಧನೆಯನ್ನು ಶ್ಲಾಘಿ-ಸಿರುವ ಪೀಟರ್ಸನ್, ಉತ್ತಮ ಕ್ರೀಡಾ ಸೌಲಭ್ಯಗಳು, ಫಿಟ್‌ನೆಸ್‌ಗೆ ಹೆಚ್ಚುತ್ತಿರುವ ಆದ್ಯತೆ ಮತ್ತು ವೃತ್ತಿಪರ ತರಬೇತಿಯು ಭಾರತೀಯ ಕ್ರೀಡಾಪಟುಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ನೆರವಾಗಿವೆ. ಪ್ರಧಾನಿ ಮೋದಿ ಅವರ ಕ್ರೀಡೆಯ ಮೇಲಿನ ಆಸಕ್ತಿ ಮತ್ತು ಫಿಟ್ ಇಂಡಿಯಾ ಅಭಿಯಾನದಿಂದ ಜನರಲ್ಲಿ ದೈಹಿಕ ಆರೋಗ್ಯ ಮತ್ತು ವ್ಯಾಯಾಮದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲು ನೆರವಾಗಿದೆ ಎಂದಿದ್ದಾರೆ.

ಮೂಲಸೌಕರ್ಯ, ತಂತ್ರಜ್ಞಾನ ಪ್ರಗತಿಗೆ ಮೆಚ್ಚುಗೆಭಾರತದಲ್ಲಿ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳ ಬಗ್ಗೆಯೂ ಪೀಟರ್ಸನ್ ತಮ್ಮ ಲೇಖನದಲ್ಲಿ ವಿವ-ರಿಸಿದ್ದಾರೆ. ವಿಮಾನ ನಿಲ್ದಾಣಗಳು, ರಸ್ತೆಗಳು, ಮೆಟ್ರೋ ವ್ಯವಸ್ಥೆಗಳು ಮತ್ತು ಹೋಟೆಲ್‌ಗಳ ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಹಿಂದೆ ಭಾರತದ ಬಗ್ಗೆ ಚರ್ಚಿಸುವಾಗ ಇಲ್ಲಿನ ಆಹಾರ, ಜನಸಂದಣಿ ಮತ್ತು ಹವಾಮಾನದ ಬಗ್ಗೆ ಹೆಚ್ಚಾಗಿ ಮಾತನಾಡುತ್ತಿದ್ದರು. ಆದರೆ ಈಗ ಭಾರತದ ಕೋವಿಡ್-19 ಲಸಿಕೆಗಳ ರಫ್ತು, ಸ್ಟಾರ್ಟ್‌ಅಪ್‌ಗಳು, ಚಂದ್ರಯಾನ ಮತ್ತು ಡಿಜಿಟಲ್ ಪಾವತಿ ವ್ಯವಸ್ಥೆಗಳ ಬಗ್ಗೆ ಚರ್ಚಿಸುತ್ತಿದ್ದಾರೆ.

ವನ್ಯಜೀವಿಗಳ ಸಂರಕ್ಷಣೆಯ ಬಗ್ಗೆ ಈ ಹಿಂದೆಯೂ ಹಲವು ಬಾರಿ ಮಾತನಾಡಿರುವ ಕೆವಿನ್ ಪೀಟರ್ಸನ್, ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಸಮಯ ಕಳೆದಿದ್ದನ್ನು ನೆನಪಿಸಿಕೊಂಡಿದ್ದಾರೆ. ಖಡ್ಗಮೃಗಗಳ ಸಂರಕ್ಷಣೆಗಾಗಿ ನಡೆಯುತ್ತಿರುವ ಕೆಲಸಗಳನ್ನು ಶ್ಲಾಘಿಸಿದ್ದಾರೆ. ಹಾಗೆಯೇ ಭಾರತದಲ್ಲಿ ಚೀತಾಗಳನ್ನು ಮರುಪ-ರಿಚಯಿಸುವ ಯೋಜನೆ ಮತ್ತು ಗುಜರಾತ್‌ನ ಏಷ್ಯನ್ ಸಿಂಹಗಳ ಸಂರಕ್ಷಣಾ ಪ್ರಯತ್ನಗಳ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದ್ದು, ಪ್ರಧಾನಿ ಮೋದಿ ಅವರನ್ನು ವೈಯಕ್ತಿಕವಾಗಿ ಭೇಟಿಯಾದ ಸಂದರ್ಭದಲ್ಲಿ ವನ್ಯಜೀವಿ ಸಂರಕ್ಷಣೆ, ವಿಶೇಷವಾಗಿ ಚೀತಾಗಳನ್ನು ಭಾರತಕ್ಕೆ ಮರಳಿ ತರುವ ಯೋಜನೆಯ ಕುರಿತು ಚರ್ಚಿಸಿದ್ದನ್ನೂ ಪೀಟರ್ಸನ್ ನೆನಪಿಸಿಕೊಂಡಿದ್ದಾರೆ.

ನೇಮಕಾತಿ ಪ್ರಕಟಣೆ

ISRO URSC ನೇಮಕಾತಿ 2026 ? 61 ಟೆಕ್ನಿಷಿಯನ್ ಮತ್ತು ಚಾಲಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 24, 2026

ISRO URSC ನೇಮಕಾತಿ 2026: 61 ಟೆಕ್ನಿಷಿಯನ್–ಬಿ (Technician-B) ಮತ್ತು ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ISRO ಯು.ಆರ್. ರಾವ್ ಸ್ಯಾಟಲೈಟ್ ಸೆಂಟರ್ (ISRO URSC), ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಟೆಕ್ನಿಷಿಯನ್–ಬಿ ಮತ್ತು ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕದ ಬೆಂಗಳೂರಿನಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: isro.gov.in

ವೀರೇಶ ಬಂಗಾರಶೆಟ್ಟರ ಅವರಿಗೆ 'ದಕ್ಷಿಣ ಕರ್ನಾಟಕ ಯೋಗ ಶಿಕ್ಷಕ ಪ್ರಶಸ್ತಿ' ಪ್ರದಾನ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಪಟ್ಟಣದ ಪತಂಜಲಿ ಯೋಗ ಸಮಿತಿಯ ಪ್ರಮುಖರಾದ ವೀರೇಶ ಬಂಗಾರಶೆಟ್ಟರ ಅವರಿಗೆ ಬೆಂಗಳೂರಿನ ರೋಟರಿ ಗ್ಲೋಬಲ್ ಯೋಗ ಸಂಸ್ಥೆಯ ವತಿಯಿಂದ 'ದಕ್ಷಿಣ ಕರ್ನಾಟಕ ಯೋಗ ಶಿಕ್ಷಕ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.



ಕಳೆದ ಮೂರು ದಶಕಗಳಿಂದ ಕುಷ್ಟಗಿ ಪಟ್ಟಣ ಸೇರಿದಂತೆ ವಿವಿಧ ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯೋಗ ಶಿಕ್ಷಣದ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸುವ ಮೂಲಕ ವೀರೇಶ ಬಂಗಾರಶೆಟ್ಟರ ಅವರು ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯೋಗದ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳುವಂತೆ ಜನರಿಗೆ ಮಾರ್ಗದರ್ಶನ ನೀಡುತ್ತಾ ಬಂದಿರುವ ಅವರ ದೀರ್ಘಕಾಲದ ಸೇವೆ ಮತ್ತು ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಭಾನುವಾರ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಮೂರು ದಶಕಗಳ ಯೋಗ ಶಿಕ್ಷಣ ಸೇವೆಗೆ ಸಂದ ಈ ಗೌರವವು ಕುಷ್ಟಗಿ ಪಟ್ಟಣಕ್ಕೆ ಹೆಮ್ಮೆಯ ವಿಷಯವಾಗಿದೆ.

ಸೀಗೆ ಹುಣ್ಣಿಮೆ ಸಿಗ್ಗವ್ವಗೌರಿಗೆ ಆರತಿ ಬೆಳಗಿದ ಮಹಿಳೆಯರು

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಕಡೇಕೊಪ್ಪ ಗ್ರಾಮದಲ್ಲಿ ಸೀಗೆ ಹುಣ್ಣಿಮೆಯ ಪ್ರಯುಕ್ತ ಮಹಿಳೆಯರು ಸಕ್ಕರೆ ಗೊಂಬೆಗಳನ್ನು ತಯಾರಿಸಿ, ಸಿಗ್ಗವ್ವಗೌರಿಗೆ ಭಕ್ತಿಭಾವದಿಂದ ಆರತಿ ಬೆಳಗುವ ಮೂಲಕ ಸಂಪ್ರದಾಯಬದ್ಧವಾಗಿ ಆಚರಣೆ ನೆರವೇರಿಸಿದರು.



ನಾಡಿನಲ್ಲಿ ಬರಗಾಲ ದೂರವಾಗಿ, ಉತ್ತಮ ಮಳೆಯಾಗಿ ಕೃಷಿ ಚಟುವಟಿಕೆಗಳು ಸಮೃದ್ಧಿಗೊಳ್ಳಲಿ. ರೈತರ ಹೊಲಗಳಲ್ಲಿ ಉತ್ತಮ ಬೆಳೆ ಬಂದು, ಅನ್ನದಾತರ ಮೊಗದಲ್ಲಿ ಸಂತಸ ಮತ್ತು ಹರ್ಷ ಮೂಡಲಿ ಎಂದು ಮಹಿಳೆಯರು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು. ಗ್ರಾಮೀಣ ಸಂಸ್ಕೃತಿ, ಸಂಪ್ರದಾಯ ಹಾಗೂ ಕೃಷಿ ಬದುಕಿನೊಂದಿಗೆ ಬೆಸೆದುಕೊಂಡಿರುವ ಸೀಗೆ ಹುಣ್ಣಿಮೆಯ ಆಚ–'ರಣೆಯಲ್ಲಿ ಕವಿತಾ ಹಿರೇಮಠ, ಮಲ್ಲಿಕಾ ಪಾಟೀಲ, ಮಂಜುಳಾ ನಿಡಗುಂದಿಮಠ ಸೇರಿದಂತೆ ಮಹಿಳೆಯರು ಪಾಲ್ಗೊಂಡಿದ್ದರು.

ಮೋದಿ ತಂದೆ ಕುರಿತು ಖರ್ಗೆ ಹೇಳಿಕೆ ವಿವಾದ: ಬಳ್ಳಾರಿಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ, ಡಿಸಿಗೆ ಮನವಿ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ: ದೇಶದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ದಿವಂಗತ ತಂದೆಯವರ ಕುರಿತು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ್ದಾರೆನ್ನಲಾದ ಆಕ್ಷೇಪಾರ್ಹ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿ, ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಜಿಲ್ಲಾ ಘಟಕದ ನೇತೃತ್ವದಲ್ಲಿ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.



ನಗರದ ಪ್ರಮುಖ ರಸ್ತೆಯಾದ ರಾಯಲ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇ–ರಿಯವರೆಗೆ ನಡೆದ ಬೃಹತ್ ರ?ಯಾಲಿಯಲ್ಲಿ ಪಕ್ಷದ ಪ್ರಮುಖ ನಾಯಕರು, ಜನಪ್ರತಿನಿಧಿಗಳು ಮತ್ತು ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷರು ಮತ್ತು ಪ್ರಮುಖ ನಾಯಕರು, "ಜವಾಬ್ದಾರಿಯುತ ಸ್ಥಾನದಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಅವರು ಸಾರ್ವಜನಿಕ ಜೀವನದ ಘನತೆಯನ್ನು ಮರೆತು ಪ್ರಧಾನಿಯವರ ಕುಟುಂಬದ ವಿರುದ್ಧ ವೈಯಕ್ತಿಕ ನಿಂದನೆಗೆ ಇಳಿದಿರುವುದು ಖಂಡನೀಯ. ಅವರು ತಕ್ಷಣವೇ ದೇಶದ ಜನತೆಯ ಮತ್ತು ಪ್ರಧಾನಿಯವರ ಕ್ಷಮೆಯಾಚಿಸಬೇಕು" ಎಂದು ಪಟ್ಟುಹಿಡಿದರು. ಪ್ರತಿಭಟನೆಯಲ್ಲಿ ಬಿಜೆಪಿಯ ಪ್ರಮುಖ ಸ್ಥಳೀಯ ಮುಖಂಡರು, ಮಾಜಿ ಜನಪ್ರತಿನಿಧಿಗಳು, ಪಾಲಿಕೆ ಸದಸ್ಯರು ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಮುಂಚೂಣಿಯಲ್ಲಿದ್ದು ಕಾಂಗ್ರೆಸ್ ನಾಯಕರ ವಿರುದ್ಧ ಘೋಷಣೆಗಳನ್ನು ಕೂಗಿದರು.


ರ‍್ಯಾಲಿಯ ನಂತರ ಜಿಲ್ಲಾಧಿಕಾ–ರಿಗಳ (DC) ಕಚೇರಿಗೆ ತೆರಳಿದ ಪ್ರಮುಖ ನಾಯಕರ ನಿಯೋಗವು ಡಿಸಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿತು. ರಾಜಕೀಯ ಸಿದ್ಧಾಂತಗಳು ಏನೇ ಇದ್ದರೂ ಸಾರ್ವಜನಿಕ ಜೀವನದಲ್ಲಿ ಗೌರವಯುತ ಮಾತು ಮತ್ತು ಸಂಯಮವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಇಂತಹ ಆಕ್ಷೇಪಾರ್ಹ ಹೇಳಿಕೆಗಳ ವಿರುದ್ಧ ಕಠಿಣ ನಿಲುವು ತಳೆಯಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಪ್ರತಿಭಟನೆಯಲ್ಲಿ ಪಕ್ಷದ ಮುಖಂಡ ರುಗಳಾದ ಜಿ.ವೆಂಕಟ ರಮಣ, ಎಸ್.ಗುರುಲಿಂಗನಗೌಡ, ಗೋನಾಳ್ ಮುರಹರಗೌಡ, ಎಸ್.ಮಲ್ಲನಗೌಡ, ಹೆಚ್.ಹನುಂಮತಪ್ಪ, ಕೆ.ಎಸ್.ದಿವಾಕರ್, ಪಾಲಿಕೆ ಪ್ರತಿ ಪಕ್ಷದ ನಾಯಕ ಮೋತ್ಕರ್ ಶ್ರೀನಿವಾಸ್, ಸದಸ್ಯ ಕೆ.ಹ ನುಂಮತಪ್ಪ, ಮುಖಂಡರುಗಳಾದ ಶಂಕ್ರಪ್ಪ, ಡಾ.ರೇಣುಕಾ ಮಂಜುನಾಥ, ಕೆ.ಎ.ವೇಮಣ್ಣ, ಹಂಪಿ ರಮಣ,ಕೆ.ಎಂ.ಮಹೇಶ್ವರಸ್ವಾಮಿ, ಪಿ.ಎಸ್. ಸೋಮಲಿಂಗನಗೌಡ, ದರೂರು ಶಾಂತನಗೌಡ, ಕೆ.ಆರ್ ಮಲ್ಲೇಶ್, ಕೋಳೂರು ಚಂದ್ರಶೇಖ ರಗೌಡ, ರಾಮಾಂಜಿನಿ ಗುಗ್ಗರಹಟ್ಟಿ, ಅಲ್ಲಾ ಬಕಾಷ್, ಮಲ್ಲಿಕಾರ್ಜುನ ಗೌಡ ಶಂಕರಬಂಡೆ, ,ಜಿಲ್ಲಾ ಮೋರ್ಚಾಗಳ ಪದಾಧಿಕಾರಿಗಳು, ಪಕ್ಷದ ಇನ್ನಿತರ ಮುಖಂಡರು ಪಾಲ್ಗೊಂಡಿದ್ದರು.

ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಂದ "ನಮ್ಮ ನಾಯಕ" ಚಲನಚಿತ್ರ ಟೀಸರ್ ಬಿಡುಗಡೆ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರ : ಮಲೈ ಮಹದೇಶ್ವರ ಎಂಟರ್ಪ್ರೈಸಸ್ ಅವರ ಎ.ಎಂ ಬಾಬು ನಿರ್ಮಾಣದ "ನಮ್ಮ ನಾಯಕ" ಚಲನಚಿತ್ರದ ಟೀಸರ್‌ನ್ನು ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಬಿಡುಗಡೆ ಮಾಡಿ ಚಿತ್ರಕ್ಕೆ ಮತ್ತು ಚಿತ್ರ ತಂಡಕ್ಕೆ ಶುಭ ಹಾರೈಸಿದರು.



ಕನ್ನಡ. ಹಿಂದಿ. ತಮಿಳು. ಮೂರು ಭಾಷೆಗಳಲ್ಲಿ ನಿರ್ಮಿಸಲಾಗುತ್ತಿರುವ ಚಲನಚಿತ್ರದ ಟೀಸರ್ ಬಿಡುಗಡೆ ಸಂದರ್ಭದಲ್ಲಿ ಕೆ ಪಿ ಸಿ ಸಿ ರಾಜ್ಯ ಸಂಚಾಲಕರು, ಮಲೈ ಮಹದೇಶ್ವರ ಗ್ರೂಪ್ ಆಫ್ ಇಂಡಸ್ಟ್ರಿ ಕಂಪನಿಯ ಮಾಲೀಕರು ಹಾಗೂ ಈ ಚಿತ್ರದ ನಿರ್ಮಾಪಕರಾದ ಎ ಎಂ ಬಾಬು, ನಿರ್ದೇಶಕರಾದ ಆರ್ ಜೆ ಮಂಜುನಾಥ್, ಸಂಕಲನಕಾರ ಆರ್ ಅನಿಲ್ ಕುಮಾರ್, ಸಂಗೀತ ನಿರ್ದೇಶಕ ವಿಜಯ್ ಹರಿತ್ಸ, ಕಲಾವಿದರಾದ ರಾಯ್ಯನ್ ಕುಶ್ , ಆಪ್ತರಾದ ಮನವಿ ಮತ್ತು ಚಿತ್ರ ತಂಡದವರು ಪಾಲ್ಗೊಂಡಿದ್ದರು.

ಯುವ ನಿರ್ದೇಶಕ ಅರ್.ಜೆ ಮಂಜುನಾಥ್ ಮೂಲತಃ ಬಾಗಲಕೋಟ ಜಿಲ್ಲೆಯ ಇಲಕಲ್‌ನವರಾಗಿದ್ದು ಚಿತ್ರಕ್ಕೆ ಕಥೆ–ಸಂಭಾಷಣೆ–ಚಿತ್ರಕಥೆ ಬರೆದು ನಿರ್ದೇಶನ ಹೊಣೆ ಹೊತ್ತಿದ್ದಾರೆ. ಅಸ್ಪೃಶ್ಯತೆಯ ವಿರುದ್ಧ ಹೋರಾಟದ ಬದುಕು ಹಾಗೂ ಭಾರತದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನಾಧಾರಿತ ಕಥೆಯ ಎಳೆಯನ್ನು ಹೊಂದಿರುವ ಚಲನಚಿತ್ರವಾಗಿದೆ.

ಚಿತ್ರದಲ್ಲಿ ರಾಯ್ಯಾನ್, ಭದ್ರಪ್ಪ, ಮಾ.ಪವನ್, ರಿಮೆಂಕ, ಮಾ.ಅಚಿಂತ್ಯ ಮೊದಲಾದವರು ಅಭಿನಯಿಸಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಬೆಂಗಳೂರು, ಕನಕಪುರ, ಮೈಸೂರು ಚಿತ್ರೀಕರಣ ನಡೆಸಲಾಗಿದೆ ಎಂದು ನಿರ್ದೇಶಕ ಮಂಜುನಾಥ್ ಹೇಳಿದರು. ಛಾಯಾಗ್ರಹಣ ಇನ್ಫಂಟ್ ಭರತ್, ಕಿರಣ ಗಜ ,ಸಾಹಿತ್ಯ ಆಕಾಶ ಎ.ಕೆ.47, ಕಿನ್ನಾಳರಾಜ್, ಸಂಗೀತ ವಿಜಯ್ ಹರಿತ್ಸಾ , ಅಪ್ಪು ವೆಂಕಟೇಶ ಸಾಹಸ, ಪ್ರಸಾಧನ ಶಿವು, ಕಲೆ ಗಣೇಶ ದಾವಣಗೆರೆ, ವಸ್ತ್ರವಿನ್ಯಾಸ ಚಿಕ್ಕೆಗೌಡ್ರು, ಆರ್ ಅನಿಲ್ ಕುಮಾರ ಡಿಐ, ಸಂಕಲನ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಪತ್ರಿಕಾಸಂಪರ್ಕ ಚಿತ್ರಕ್ಕಿದೆ. ಸದ್ಯ ಮಲೈ ಮಹದೇಶ್ವರ ಯೂಟ್ಯೂಬ್‌ನಲ್ಲಿ ಟೀಸರ್ ಬಿಡುಗಡೆಯಾಗಿದ್ದು ಚಿತ್ರವನ್ನು ಶೀಘ್ರದಲ್ಲೇ ರಾಜ್ಯಾದ್ಯಂತ ಬಿಡುಗಡೆ ಮಾಡಲಾಗುವದೆಂದು ನಿರ್ಮಾಪಕ ಎ ಎಂ ಬಾಬು ತಿಳಿಸಿದ್ದಾರೆ.

–ಡಾ.ಪ್ರಭು ಗಂಜಿಹಾಳ

ಶಿಕ್ಷಕರ ವಿಶ್ವಾಸಕ್ಕೆ ಸಂದ ಜಯ: ಶಶಿಲ್ ಜಿ. ನಮೋಶಿ ಅವರಿಗೆ ಭಾರತಿ ಗುಡದೂರು ಅಭಿನಂದನೆ

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಹೊಸ ಭರವಸೆ ಶಿಕ್ಷಕರ ಆಶೋತ್ತರಗಳಿಗೆ ಮತ್ತಷ್ಟು ಬಲ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ವಿಜಯಶಾಲಿಯಾಗಿರುವ ಗೌರವಾನ್ವಿತ ಶ್ರೀ ಶಶಿಲ್ ಜಿ. ನಮೋಶಿ ಅವ–ರಿಗೆ ಸಾಮಾಜಿಕ ಹಾಗೂ ಮಹಿಳಾ ಮತ್ತು ಮಕ್ಕಳ ಕಾರ್ಯಕರ್ತೆ ಭಾರತಿ ಗುಡದೂರು ಅವರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಇನ್ನಷ್ಟು ಮಹತ್ವದ ಕೊಡುಗೆ ನೀಡುವಂತಾಗಲಿ ಎಂದು ಶುಭ ಹಾರೈಸಿದ್ದಾರೆ.





ಶಿಕ್ಷಕರ ವಿಶ್ವಾಸ, ಬೆಂಬಲ ಹಾಗೂ ಆಶೋತ್ತರಗಳಿಗೆ ಸಂದ ಜಯ ಇದಾಗಿದೆ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದು, ಅವರ ಹಕ್ಕುಗಳ ರಕ್ಷಣೆ, ವೃತ್ತಿಪರ ಗೌರವವನ್ನು ಹೆಚ್ಚಿಸುವುದು ಹಾಗೂ ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದು ಅತ್ಯಂತ ಮಹತ್ವದ ಜವಾಬ್ದಾ–ರಿಯಾಗಿದೆ. ಈ ನಿಟ್ಟಿನಲ್ಲಿ ಶ್ರೀ ಶಶಿಲ್ ಜಿ. ನಮೋಶಿ ಅವರ ಗೆಲುವು ಶಿಕ್ಷಕ ಸಮುದಾಯದಲ್ಲಿ ಹೊಸ ನಿರೀಕ್ಷೆಗಳನ್ನು ಮೂಡಿಸಿದೆ ಎಂದು ಭಾರತಿ ಗುಡದೂರು ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಕರು ಸಮಾಜದ ಭವಿಷ್ಯವನ್ನು ರೂಪಿಸುವ ಮಹತ್ವದ ಶಕ್ತಿಯಾಗಿದ್ದಾರೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ, ಮೌಲ್ಯಾಧಾರಿತ ಸಮಾಜ ನಿರ್ಮಾಣದಲ್ಲಿಯೂ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದ್ದರಿಂದ ಶಿಕ್ಷಕರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು, ಅವರ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸುವುದು, ವರ್ಗಾವಣೆ ಸೇರಿದಂತೆ ವಿವಿಧ ಸೇವಾ ಸಂಬಂಧಿತ ಸಮಸ್ಯೆಗಳನ್ನು ಪರಿಹ–ರಿಸಲು ಪ್ರಯತ್ನಿಸುವುದು ಹಾಗೂ ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ಹಿತಾಸಕ್ತಿಗಳನ್ನು ಕಾಪಾಡುವುದು ಆದ–'ತೆಯಾಗಬೇಕಿದೆ ಎಂದು ಅವರು ತಿಳಿಸಿದ್ದಾರೆ.


ಶಿಕ್ಷಕರ ಸಮಸ್ಯೆಗಳಿಗೆ ಸದನದಲ್ಲಿ ಧ್ವನಿಯಾಗುವ ಮೂಲಕ, ಶಿಕ್ಷಣ ವ್ಯವಸ್ಥೆಯಲ್ಲಿನ ಸವಾಲುಗಳನ್ನು ಸರ್ಕಾರದ ಗಮನಕ್ಕೆ ತಂದು ಸೂಕ್ತ ಪರಿಹಾರ ದೊರಕಿಸಲು ಶಶಿಲ್ ಜಿ. ನಮೋಶಿ ಅವರು ಪ್ರಾಮಾಣಿಕವಾಗಿ ಶ್ರಮಿಸಲಿ ಎಂಬ ಆಶಯವನ್ನು ಭಾರತಿ ಗುಡದೂರು ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವುದರ ಜೊತೆಗೆ ಶಿಕ್ಷಕರಿಗೆ ನ್ಯಾಯ, ಗೌರವ ಮತ್ತು ಭದ್ರತೆ ಒದಗಿಸುವ ನಿಟ್ಟಿನಲ್ಲಿ ಅವರ ಕಾರ್ಯಗಳು ಮಾದರಿಯಾಗಲಿ ಎಂದು ಹಾರೈಸಿದ್ದಾರೆ.

ಶ್ರೀ ಶಶಿಲ್ ಜಿ. ನಮೋಶಿ ಅವರ ಈ ಗೆಲುವು ಶಿಕ್ಷಕರ ನಿರೀಕ್ಷೆಗಳಿಗೆ ಮತ್ತಷ್ಟು ಬಲ ತುಂಬಿದ್ದು, ಮುಂದಿನ ದಿನಗಳಲ್ಲಿ ಶಿಕ್ಷಕರ ಧ್ವನಿಯಾಗಿ, ಶಿಕ್ಷಣ ಕ್ಷೇತ್ರದ ಪ್ರಗತಿಗೆ ಶ್ರಮಿಸಿ, ಶಿಕ್ಷಕ ಸಮುದಾಯದ ವಿಶ್ವಾಸವನ್ನು ಉಳಿಸಿಕೊಳ್ಳಲಿ. ಅವರ ಮುಂದಿನ ರಾಜಕೀಯ ಹಾಗೂ ಸಾರ್ವಜನಿಕ ಜೀವನ ಯಶಸ್ಸಿನಿಂದ ಕೂಡಿರಲಿ ಎಂದು ಭಾರತಿ ಗುಡದೂರು ಅವರು ಹೃತ್ಪೂರ್ವಕ ಶುಭಾಶಯಗಳನ್ನು ತಿಳಿಸಿದ್ದಾರೆ.


ಸಹಸ್ರಾರು ಸಂಖ್ಯೆಯ ರೈತರಿಂದ ಡಿ.31ರವರೆಗೆ ನೀರು ಹರಿಸಲು ಬೃಹತ್ ಪ್ರತಿಭಟನೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಈ ದೇಶಕ್ಕೆ ಪ್ರಧಾನಮಂತ್ರಿ ಮುಖ್ಯಮಂತ್ರಿಗಳು, ಹಾಗೂ ಅಧಿಕಾರಿಗಳು ಮತ್ತು ಕಾರ್ಖಾನೆಗಳು ಕೂಡ ಇಲ್ಲವೆಂದರೂ ನಡೆಯುತ್ತದೆ ಆದರೆ ರೈತರಿಲ್ಲವೆಂದರೆ ದೇಶ ಮತ್ತು ಇಡೀ ಜಗತ್ತು ನಡೆಯುವುದಿಲ್ಲ ಎಂದು ಬಂಗಾರಿ ಕ್ಯಾಂಪಿನ ಸದಾನಂದ ಶರಣರು ಹೇಳಿದರು.







ನಗರದ ತಹಶೀಲ್ದಾರ್ ಕಚೇರಿ ಮುಂದೆ ಮಂಗಳವಾರ ತುಂಗಭದ್ರಾ ಜಲಾಶಯ ರೈತ ಒಕ್ಕೂಟ ಹೋರಾಟ ಸಮಿತಿಯಿಂದ ಹಮ್ಮಿಕೊಂಡಿದ್ದ ಬೃಹತ್ ಅನಿರ್ಧಿಷ್ಟ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದ ಅವರು, ರೈತರ ಸಮಸ್ಯೆಗಳನ್ನು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ನಾವು ವಿಧಾನಸೌಧದಲ್ಲಿ ಮಾತನಾಡಲು ಆಗುವುದಿಲ್ಲ. ಎಂಬ ಕಾರಣಕ್ಕೆ ಶಾಸಕರನ್ನಾಗಿ ಆಯ್ಕೆ ಮಾಡಿ ಕಳುಹಿಸಿ ಕೊಡುತ್ತೇವೆ, ವೋಟ ಹಾಕುವಾಗಿರುವ ಸಂದರ್ಭ ನಂತರ ಇರುವುದಿಲ್ಲ. ಇದನ್ನು ಪ್ರತಿಯೊಬ್ಬ ರೈತರು ಅರ್ಥಮಾಡಿಕೊಳ್ಳಬೇಕು.

ಎಲ್ಲ ರೈತರು ಪಕ್ಷಭೇದ ಮರೆತು ಒಗ್ಗೂಡಿ ಅ.30ಕ್ಕೆ ಅಂಬಾದೇವಿ ಶಿಲಾ ಮಂಟಪ ಲೋಕಾರ್ಪಣೆಗೆ ಬರುವ ಮುಖ್ಯಮಂತ್ರಿಗಳಿಗೆ ಘೇರಾವು ಹಾಕಿ, ಡಿಸೆಂಬರ್ 31ರ ವರೆಗೆ ಎಡದಂಡೆ ಕಾಲುವೆಗಳಿಗೆ ನೀರು ಹರಿಸುತ್ತೇನೆ ಎಂದು ಹೇಳುವವರಿಗೂ ಅವರನ್ನು ಬೆಂಗಳೂರಿಗೆ ಬಿಡಬೇಡಿ, ಅಲ್ಲದೇ ಅಂದಿನ ದಿನ ಸಿಂಧನೂರಿನಿಂದ ಅಂಬಾಮಠದವರೆಗೂ ಎಲ್ಲಾ ರೈತರು ಪಾದಯಾತ್ರೆ ಮಾಡಿ ಘೇರಾವು ಹಾಕಿ, ನೀರು ಬಿಡುವ ಭರವಸೆ ಕೊಟ್ಟ ಮೇಲೆ ಅವರನ್ನು ಬೆಂಗಳೂರಿಗೆ ಹೋಗಲು ಬಿಡಿ, ನೀರು ಬಿಡಲಾಗಲಿಲ್ಲವೆಂದರೆ, ನಮ್ಮೆಲ್ಲ ರೈತರನ್ನು ಶೂಟ್ ಮಾಡಿಸಿದರು ಪರವಾಗಿಲ್ಲ ನಾವು ನಿಮ್ಮನ್ನು ಹೋಗಲು ಬಿಡದೆ ಇಲ್ಲೆ ಕೂರುತ್ತೇವೆಂದರೆ ಮಾತ್ರ ರೈತರು ಉಳಿಯಲಿಕ್ಕೆ ಸಾಧ್ಯ.

ಬೆಳಗಾವಿಯಲ್ಲಿ ರೈತರ ಸಮಸ್ಯೆಗಳನ್ನು ಇತ್ಯಾರ್ಥ ಮಾಡಕತ್ತಾರ ಒಂದು ಕಡೆ ರೈತ–ರಿದ್ದಾರೆ, ಇನ್ನೊಂದು ಕಡೆಗೆ ಫ್ಯಾಕ್ಟರಿ ಮಾಲೀಕರು, ರಾಜಕಾರಣಿಗಳೆ ಫ್ಯಾಕ್ಟರಿ ಮಾಲೀಕರಿದ್ದಾರೆ. ಇವರು ರೈತರ ಸಮಸ್ಯೆಗಳನ್ನು ಬಗೆ ಹ–ರಿಸುತ್ತಾರಾ? ಎಂದು ಪ್ರಶ್ನಿಸಿದರು. ಈಗಾಗಲೇ ಉಳಿದಿರುವ ಆಂದ್ರ ಕೋಟಾದಲ್ಲಿರುವ 15 ಟಿಎಂಸಿ ನೀರನ್ನು ನಮಗೆ ಕೊಡಿಸಿದರೆ ಬೆಳೆದಿರುವ ಬೆಳೆಗಳು ಉಳಿಯಲಿಕ್ಕೆ ಸಾಧ್ಯವಾಗುತ್ತದೆ.

ನಮ್ಮ ಸಿಂಧನೂರು ತಾಲೂಕನ್ನು ನೀರಾವರಿ ಪ್ರದೇಶ ಎಂದು ಮೀಸೆ ತಿರುಗಿಸಿಕೊಂಡು ತಿರುಗಾಡುತ್ತಿದ್ದೇವೆ, ಇವತ್ತು ಕೆಲವೊಂದು ಹಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರಿಲ್ಲ ನಾವು ನೀರಾವರಿ ಮಂದಿನಾ? ಇದು ನಮ್ಮ ದುರಂತ ನವಲಿ ಸಮಾನಾಂತರ ಜಲಾಶಯದ ಕನಸನ್ನು ಬಿತ್ತಿದ ಸರ್ಕಾರ ಎಷ್ಟೋ ವರ್ಷಗಳಿಂದ ಮುಂದೂಡುತ್ತಿದೆ. ನಮ್ಮ ಭಾಗಕ್ಕೆ ಸಮಗ್ರ ನೀರಾವರಿ ಆಗಬೇಕೆಂದರೆ, ನವಲಿ ಸಮಾನಾಂತರ ಜಲಾಶಯವಾದಾಗ ಮಾತ್ರ ಸಂಪೂರ್ಣ ನೀರಾವರಿ ಪ್ರದೇಶವಾಗಬಹುದೇನೋ!

ತುಂಗಭದ್ರಾ ಜಲಾಶಯದಲ್ಲಿ 33 ಟಿಎಂಸಿಯಷ್ಟಯ ಹೂಳು ತುಂಬಿದೆ ಎಂದು ಈ ಭಾಗದ ರೈತರೆಲ್ಲರೂ ಸೇರಿ, ಟ್ರಾಕ್ಟರ್ ತೆಗೆದುಕೊಂಡು ಹೋಗಿ ಹೂಳು ತೆಗೆಯಲಿಕ್ಕೆ ಪ್ರಾರಂಭಿಸಿದರೆ ಸರ್ಕಾರ ಅವರ ಹತ್ತಿರನೆ ಬರಲಿಲ್ಲ ಇದೆಂತಹ ರೈತರ ದುರ್ದೈವ ಎಂದು ವಿಷಾಧ ವ್ಯಕ್ತಪಡಿಸಿ, ಕೆ.ಆರ್.ಎಸ್.ಡ್ಯಾಂಗೆ ಸಮಸ್ಯೆ ಬಂದರೆ ತಕ್ಷಣವೇ ಸ್ಪಂದಿಸುವ ಸರ್ಕಾರ ನಮ್ಮ ತುಂಗಭದ್ರಾ ಡ್ಯಾಂಗೆ ಮಲತಾಯಿ ಧೋರಣೆ ಮಾಡುತ್ತಿದೆ. ನವಲಿ ಜಲಾಶಯಕ್ಕೆ ಹಣ ಕಡಿಮೆ ಬಿದ್ದರೆ ರೈತರೆಲ್ಲರೂ ಸೇರಿ ದೇಣಿಗೆ ಕೊಡುತ್ತಾರೆ. ರೈತರದು ಕೊಡುವ ಕೈ ಬೇಡುವ ಕೈಯಲ್ಲ, 2500 ಪರಿಹಾರ ಕೊಡುತ್ತೀವಿ ಅಂತಿರಲ್ಲ ರೈತರೇನು ನಿಮ್ಮನ್ನ ಭೀಕ್ಷೆ ಬೇಡುತ್ತಿದ್ದಾರಾ? ಪ್ರತಿ ಎಕರೆಗೆ 50 ಸಾವಿರ ಪರಿಹಾರ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದರು.

ನಂತರ ರೈತ ಮುಖಂಡರಾದ ಅಮೀನ್ ಪಾಷಾ ದಿದ್ದಿಗಿ, ಬಸವರಾಜ ಗೋಡಿಹಾಳ, ನಿರುಪಾದಿ ಗೋಮರ್ಸಿ, ಚಂದ್ರಶೇಖರ ಗೊರೇಬಾಳ, ಶರಣೇಗೌಡ, ಬಸವರಾಜ ಹಂಚಿನಾಳ, ಡಿ.ಎಚ್. ಕಂಬಳಿ, ಶಿವರಾಜ ಗುಂಜಳ್ಳಿ, ಮಲ್ಲಿಕಾರ್ಜುನರೆಡ್ಡಿ ಸಾಸಲಮರಿ, ವೆಂಕನಗೌಡ, ಸೇರಿದಂತೆ ಅನೇಕ ರೈತ ಮುಖಂಡರು ವಿವಿಧ ಮುಖಂಡರು ಡಿಸೆಂಬರ್ 31ರವರೆಗೆ ನೀರು ಹರಿಸಬೇಕು. 12 ಗಂಟೆ ವಿದ್ಯುತ್ ಕೊಡಬೇಕು, ಫಸಲ್ ಭೀಮಾ ಯೋಜನೆಯಡಿ ಬಾಕಿಯಿರುವ ಬೆಳೆ ವಿಮೆ ಬಿಡುಗಡೆ ಮಾಡಬೇಕು, ಪ್ರತಿ ಎಕರೆಗೆ 50 ಸಾವಿರ ಪರಿಹಾರ ಕೊಡಬೇಕು, ರೈತರ ಕೃಷಿ ಸಾಲ ಮನ್ನಾ ಮಾಡಬೇಕು, 33 ಟಿಎಂಸಿ ಹೂಳು ತೆಗೆಯಲು ಕ್ರಮ ಕೈಗೊಳ್ಳಬೇಕು, ಸಮಾನಾಂತರ ಜಲಾಶಯ ಯೋಜನೆ ತ್ವ–ರಿತಗೊಳಿಸಬೇಕು, ಭತ್ತದ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲ್ ಗೆ 5 ಸಾವಿರ ಹೆಚ್ಚಿಸಬೇಕು, ಪೋತ್ನಾಳ ಹಳ್ಳಕ್ಕೆ ನೀರು ಹರಿಸಬೇಕು. ಅಕ್ರಮ ನೀರಾವ–ರಿಯನ್ನು ತಡೆಗಟ್ಟಬೇಕು, ಟಿಬಿ ಡ್ಯಾಂಗೆ 2026 ರಲ್ಲಿ ಹರಿದು ಬಂದ ಪ್ರತಿದಿನದ ಒಳ ಮತ್ತು ಹೊರ ಹರಿವಿನ ಲೆಕ್ಕ ಕೊಡಬೇಕು, ಜೊತೆಗೆ 33 ಟಿಎಂಸಿ ಹೂಳಿನ ಸಮಗ್ರ ಪರಿಷ್ಕರಣೆಯ ವರದಿಯನ್ನು ನೀಡಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಇದೇ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಎರಡು ಬಣದಿಂದ ಬೆಂಬಲ, ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣಶೆಟ್ಟಿ ಬಣ, ಸಿಂಧನೂರು ಅಗ್ರಿ ಅಸೋಸಿಯೇಷನ್, ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣ, ಜಾತಿ ನಿರ್ಮೂಲನ ವೇದಿಕೆ, ಅಂ ಆದ್ಮಿ ಪಾರ್ಟಿ, ವಿದ್ಯಾರ್ಥಿ ಸಂಘಟನೆ, ಮಸ್ಕಿ ತಾಲೂಕಿನ ಚಿಕ್ಕದಿನ್ನಿಯಿಂದ 100 ಜನರು, ಹಾಗೂ ತಾಲೂಕಿನ ಸಹಸ್ರಾರು ರೈತರು ಆಗಮಿಸಿ, ನೀರಿಗಾಗಿ ರೈತರ ಬೃಹತ್ ಅನಿರ್ಧಿಷ್ಟ ಧರಣಿ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿದರು.

ಡಾ.ಸುರೇಶಗೌಡರಿಂದ ಸಕ್ರಿಯ ಕ್ಷಯರೋಗ ಪತ್ತೆಯ ಕಾರ್ಯಕ್ರಮಕ್ಕೆ ಚಾಲನೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯ ರೋಗ ನಿರ್ಮೂಲನ ಅಧಿಕಾರಿಗಳ ಕಾರ್ಯಲಯ ರಾಯಚೂರು ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯದ ಸಂಂ-ಯುಕ್ತಾಶ್ರಯದಲ್ಲಿ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಸುರೇಶಗೌಡ ಸಕ್ರಿಯ ಕ್ಷಯರೋಗದ ಪತ್ತೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿ, ಕ್ಷಯ ರೋಗವು ಸಾಂಕ್ರಾಮಿಕ ರೋಗವಾಗಿದ್ದು, ಇದನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಸರ್ಕಾರ ರಾಜ್ಯದಲ್ಲಿ ಸಕ್ರಿಯ ಕ್ಷಯ ರೋಗ ಪತ್ತೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅದರಂತೆ ರಾಯಚೂರು ಜಿಲ್ಲೆಯಲ್ಲಿ ಕ್ಷಯರೋಗ ಪತ್ತೆ ಕಾರ್ಯಕ್ರಮ ಅಕ್ಟೋಬರ್ 27ರಿಂದ ಡಿಸೆಂಬರ್ 8 ರವರೆಗೆ ನಡೆಯಲಿದ್ದು, ಇದರಲ್ಲಿ 24 ಸದಸ್ಯರು, ಮೇಲ್ವಿಚಾರಕರು, ಹಾಗೂ 70 ಸಾವಿರ ಜನಸಂಖ್ಯೆಯ ತಂಡಗಳ ಸಂಖ್ಯೆ 65 ಇದ್ದು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಆಶಾ ಕಾರ್ಯಕರ್ತರು ಸ್ವಯಂ ಸೇವಕರು ಕೆಲವು ಆಯ್ದ ಉಪಕೇಂದ್ರ ಮತ್ತು



ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಮನೆ ಮನೆ ಭೇಟಿ ಮಾಡಿ ಮನೆಯ ಸದಸ್ಯರ ಆರೋಗ್ಯವನ್ನು ವಿಚಾರಿಸಿ ಕುಟುಂಬದಲ್ಲಿ ಯಾವುದೇ ವ್ಯಕ್ತಿಗೆ ಕ್ಷಯ ರೋಗದ ಲಕ್ಷಣಗಳು ಕಂಡು ಬಂದರೆ, ಆ ವ್ಯಕ್ತಿಗಳನ್ನು ಹತ್ತಿರದ ಪ್ರಾಥ-ಮಿಕ ಆರೋಗ್ಯ ಕೇಂದ್ರ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆ ಇಲ್ಲಿಗೆ ಕಫ ಪರೀಕ್ಷೆ ಮತ್ತು ಎಕ್ಸರೇಗೆ ಕಳಿಸಲಾಗುತ್ತದೆ.


ರೋಗವು ದೃಢಪಟ್ಟರೆ ಆ ವ್ಯಕ್ತಿಗೆ ಹತ್ತಿರದ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಕ್ಷಯ ರೋಗ ತಪಾಸಣೆ ಮತ್ತು ಚಿಕಿತ್ಸೆ ಸಂಪೂರ್ಣ ಉಚಿತ ಗ್ರಾಮಗಳ ಮನೆಗೆ ಭೇಟಿ ನೀಡಿ, ಆರೋಗ್ಯ ಇಲಾಖೆ ಸಿಬ್ಬಂದಿಗಳಿಗೆ ಸಹಕರಿಸುವಂತೆ ಕರೆ ನೀಡಿದರು. ಕ್ಷಯ ರೋಗ ಗುಣಮುಖವಾಗುವಂತ ರೋಗವಾಗಿದ್ದು, ಕ್ಷಯ ರೋಗದ ಲಕ್ಷಣಗಳು ಎರಡು ವಾರಕ್ಕಿಂತ ಹೆಚ್ಚು ಕೆಮ್ಮು ಇರುವುದು ಕಫ ಕಾಣಿಸಿ ಕೊಳ್ಳುವುದು ಕಫದಲ್ಲಿ ರಕ್ತ ಬೀಳುವುದು ಹಸಿವಾಗದೆ ಇರುವುದು ತೂಕ ಕಡಿಮೆಯಾಗುವುದು ಎದೆನೋವು ಕಾಣಿಸಿಕೊಳ್ಳುವುದು, ಇತರೆ ರೋಗದ ಲಕ್ಷಣಗಳು ಕಂಡು ಬಂದರೆ, ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆ ಭೇಟಿ ನೀಡಿ ಪರೀಕ್ಷೆ ಮಾಡಿಸಿ ರೋಗಕ್ಕೆ ಸರಿಯಾಗಿ 6 ತಿಂಗಳ ಕಾಲ ಚಿಕಿತ್ಸೆ ಪಡೆದರೆ ಸಂಪೂರ್ಣ ಗುಣಮುಖ ವಾಗುತ್ತದೆ. ಚಿಕಿತ್ಸೆಯ ಸಮಯದಲ್ಲಿ ರೋಗಿಗೆ ಪೌಷ್ಟಿಕ ಆಹಾರದ ನಿಮಿತ್ತ ಮಾಸಿಕ 1 ಸಾವಿರ ರೂ.ಚಿಕಿತ್ಸೆ ಮುಗಿಯುವವರೆಗೆ ರೋಗಿಗೆ ಡಿ.ಬಿ.ಟಿ ಮೂಲಕ ನೀಡಲಾಗುತ್ತದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳಲು ತಿಳಿಸಿದರು.

ಈ ಸಂದರ್ಭದಲ್ಲಿ: ಡಾ.ಹರ್ಷ ತೋಟದ್ ಡಾ. ಮಣಿಶಂಕರ್, ನಮ್ಮ ಕ್ಲಿನಿಕ್ ಹಾಗೂ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ್, ತಾಲೂಕು ಸಂಗನಗೌಡ ಮಾಲಿ ಪಾಟೀಲ್, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಿಣಾಧಿಕಾರಿಗಳು, ಸನ್ ರೈಸ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರು ಹಾಗೂ ವಿದ್ಯಾರ್ಥಿಗಳು, ತಾಲೂಕಿನ ಕ್ಷಯರೋಗ ಮೇಲ್ವಿಚಾರಕರು ಯಮೂನರಪ್ಪ, ಸುರೇಶರೆಡ್ಡಿ, ಹಿರಿಯ ಆರೋಗ್ಯ ನಿರೀಕ್ಷಣೆ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಸುರಕ್ಷತೆ ಅಧಿಕಾರಿಗಳು, ಪ್ರಾಥಮಿಕ ಸುರಕ್ಷತೆ ಅಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತರು, ಸ್ವಯಂ ಸೇವಕರು ಭಾಗವಹಿಸಿದ್ದರು.

ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್ ರವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭೇಟಿ ಹಲವಾರು ವಿಚಾರಗಳ ಬಗ್ಗೆ ಚರ್ಚೆ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಇಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಬಿಕೆ ಹ-ರಿಪ್ರಸಾದ್ ರವರು ಭೇಟಿಯಾಗಿ ಹಲವಾರು ವಿಚಾರಗಳ ಬಗ್ಗೆ ಮಾತುಕತೆ ನಡೆಸಿದರು. ಇಬ್ಬರು ನಾಯಕರುಗಳು ಸುಮಾರು ಅರ್ಧ ಗಂಟೆಗೂ ಹೆಚ್ಚು ಗಳ ಕಾಲ ಮಾತುಕತೆ ಹಲವಾರು ವಿಚಾರಗಳ ಬಗ್ಗೆ ಚರ್ಚೆ ನಡೆಸಿದ ನಾಯಕರುಗಳು ರಾಜ್ಯದ ಈಗಿನ ಬೆಳವಣಿಗೆ



ಮತ್ತು ವಿದ್ಯಮಾನಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದರೆ ಎಂದು ಹೇಳಲಾಗಿದ್ದು.

ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಬಿಕೆ ಹರಿಪ್ರಸಾದ್ ರವರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ರಾಜ್ಯದ ಮುಂದಿನ ಚುನಾವಣೆಗಳು ಹಾಗೂ ಪಕ್ಷ ಸಂಘಟನೆ ಬಗ್ಗೆ ಚರ್ಚೆ ನಡೆಸಿದರು ಎಂದು ಹೇಳಲಾಗುತ್ತಿದ್ದು ಅಲ್ಲದೆ ಇನ್ನು ಹಲವಾರು ವಿಚಾರಗಳ ಬಗ್ಗೆ ಸುದೀರ್ಘವಾಗಿ ಈ ಇಬ್ಬರು ನಾಯಕರು ಚರ್ಚೆ ನಡೆಸಿದರು ಎಂದು ಹೇಳಲಾಗಿದೆ

ಬಳ್ಳಾರಿ ಜಿಲ್ಲಾ ರಾಜ್ಯೋತ್ಸವ ಧ್ವಜಾರೋಹಣಕ್ಕೆ ಸಚಿವ ಜಮೀರ್ ಅಹ್ಮದ್ ನೇಮಕ: ಸರ್ಕಾರದ ಅಧಿಕೃತ ಆದೇಶ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ: ಮುಂಬರುವ ನವೆಂಬರ್ 1 ರಂದು ಜರುಗಲಿರುವ 2026ರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಬಳ್ಳಾರಿ ಜಿಲ್ಲಾ ಮಟ್ಟದ ಮುಖ್ಯ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಲು ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಅವರನ್ನು ನಿಯೋಜಿಸಿ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ.

ನವೆಂಬರ್ 1 ರಂದು ಬೆಳಿಗ್ಗೆ 9:00 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕ ಧ್ವಜಾರೋಹಣ ನೆರವೇರಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರು ಗೌರವ



ವಂದನೆ ಸ್ವೀಕರಿಸಲಿದ್ದಾರೆ. ಇದಾದ ನಂತರ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ನಾಡು-ನುಡಿಯ ಹಿರಿಮೆಯನ್ನು ಸಾರುವ ಮೆರವಣಿಗೆಗಳು ಜರುಗಲಿವೆ. ಜಿಲ್ಲಾಡಳಿತದ ವತಿಯಿಂದ ಕಾರ್ಯಕ್ರಮದ ಪೂರ್ವಸಿದ್ಧತೆಗಳು ಈಗಾಗಲೇ ಬಿರುಸಿನಿಂದ ಸಾಗಿವೆ.

ಹಳೆಯ ನೆನಪು ಮತ್ತು ಕಾರ್ಯದೊತ್ತಡದ ಹಿನ್ನೆಲೆ: ಈ ಹಿಂದೆ ಸಿದ್ದರಾಮಯ್ಯ ಅವರ ನೇತೃತ್ವದ ಕಳೆದ ಸರ್ಕಾರದಲ್ಲಿ ಜಮೀರ್ ಅಹ್ಮದ್ ಅವರು ವಿಜಯನಗರದ ಜೊತೆಗೆ ಬಳ್ಳಾರಿ ಜಿಲ್ಲೆಗೂ ಉಸ್ತುವಾರಿ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಇತ್ತೀಚೆಗಷ್ಟೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಜಮೀರ್ ಅವರನ್ನು ವಿಜಯನಗರ ಜಿಲ್ಲೆಯ ಉಸ್ತುವಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಆದರೆ, ತಮ್ಮ ಇಲಾಖೆಯ ತೀವ್ರ ಕಾರ್ಯದೊತ್ತಡದ ಹಿನ್ನೆಲೆಯಲ್ಲಿ ಉಸ್ತುವಾರಿ ಜವಾಬ್ದಾ-ರಿಯನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಅವರು ಸಚಿವ ಸ್ಥಾನದ ಹೆಚ್ಚುವರಿ ಹೊಣೆಯನ್ನು ವಿನಮ್ರವಾಗಿ ನಿರಾಕರಿಸಿದ್ದರು. ಆದರೆ, ರಾಜ್ಯೋತ್ಸವದ ಈ ಮಹತ್ವದ ದಿನದಂದು ಬಳ್ಳಾರಿಯಲ್ಲಿ ಧ್ವಜಾರೋಹಣ ನೆರವೇರಿಸುವ ಜವಾಬ್ದಾರಿಯನ್ನು ಸರ್ಕಾರ ಈಗ ಅವರಿಗೆ ವಹಿಸಿಕೊಟ್ಟಿದೆ.

ದಸರಾ ಮಾದರಿಯಲ್ಲಿ ಹಾಸನಾಂಬೆ ಜಾತ್ರಾ ಮಹೋತ್ಸವಕ್ಕೆ ಸಿದ್ಧತೆ; ಕೆಎಸ್ಆರ್‌ಟಿಸಿಯಿಂದ ಟೂರ್ ಪ್ಯಾಕೇಜ್

❏ ನೈಜ್ಯ ದೆಸೆ ನ್ಯೂಸ್

ಹಾಸನ: ಇತ್ತೀಚಿನ ಮಳೆಯಿಂದಾಗಿ ಹಾಸನಾಂಬೆ ಜಾತ್ರೆಯ ಸಿದ್ಧತೆಗಳಿಗೆ ಅಡಚಣೆಯಾಗಿದ್ದರೂ, ಇದೀಗ ಮಳೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಸಿದ್ಧತೆಗಳನ್ನು ಚುರುಕುಗೊಳಿಸಲಾಗಿದೆ. ನಿಗದಿತ ಅವಧಿಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ಎಂ.ಶಿವಲಿಂಗೇಗೌಡ ತಿಳಿಸಿದರು. ನಗರದಲ್ಲಿ ಮಹರ್ಷಿ ವಾಲೀಕಿ ಜಯಂತಿ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿಯ ಹಾಸನಾಂಬೆ ಉತ್ಸವಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗಿದ್ದು, ನ.6ರಂದು ಹಾಸನಕ್ಕೆ ಭೇಟಿ ನೀಡಲು ದಿನಾಂಕ ನಿಗದಿಯಾಗಿದೆ ಎಂದರು.

ಹಾಸನಾಂಬೆ ಉತ್ಸವದ ಅಂಗವಾಗಿ ನಗರದಲ್ಲಿ ಮೈಸೂರು ಮಾದರಿಯ ವಿದ್ಯುತ್ ದೀಪಾಲಂಕಾರ ಮಾಡಲು ಕ್ರಮ ಕೈಗೊಳ್ಳಲಾಗುವುದು. ಉತ್ಸವದ ಸಿದ್ಧತೆಗಳನ್ನು ಖುದ್ದಾಗಿ ಪರಿಶೀಲಿಸಿ, ಯಾವುದೇ ಲೋಪದೋಷಗಳಿದ್ದರೆ ಅವುಗಳನ್ನು ತಕ್ಷಣ ಸರಿಪಡಿಸಲಾಗುವುದು. ಕಳೆದ ವರ್ಷದ ಅನುಭವದ ಆಧಾರದಲ್ಲಿ ಈ ಬಾರಿಯೂ ಅಗತ್ಯ ವ್ಯವಸ್ಥೆಗಳನ್ನು ರೂಪಿಸಲಾಗಿದ್ದು, ಉತ್ಸವವನ್ನು ಯಶಸ್ವಿಯಾಗಿ ನಡೆಸಲು ಜಿಲ್ಲಾಡಳಿತ ಸಜ್ಜಾಗಿದೆ ಎಂದು ಹೇಳಿದರು.

ಸ್ಥಳೀಯರಿಗೆ ದರ್ಶನಕ್ಕೆ ಹಿಂದಿನ ವ್ಯವಸ್ಥೆಯೇ ಮುಂದುವರಿಕೆ : ಹಾಸನಾಂಬೆ ದರ್ಶನಕ್ಕೆ ಸ್ಥಳೀಯರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ಕಳೆದ ವರ್ಷ ಅನುಸರಿಸಿದ ವ್ಯವಸ್ಥೆಯನ್ನೇ ಈ ಬಾರಿಯೂ ಮುಂದುವ-



ರಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ಕಳೆದ ವರ್ಷದ ವ್ಯವಸ್ಥೆ ಯಶಸ್ವಿಯಾಗಿದ್ದು, ರಾಜ್ಯದಾದ್ಯಂತ ಉತ್ತಮ ಪ್ರತಿಕ್ರಿಯೆ ಮತ್ತು ಮೆಚ್ಚುಗೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಅದೇ ಮಾದರಿಯನ್ನು ಮುಂದುವರಿಸಲು ನಿರ್ಧ-ರಿಸಲಾಗಿದೆ ಎಂದರು.ಜಾತ್ರೆಗೆ ಆಗಮಿಸುವ ಭಕ್ತರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು ಹಾಗೂ ಉತ್ಸವದ ವ್ಯವಸ್ಥೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವುದು ಜಿಲ್ಲಾಡಳಿತದ ಆದ್ಯತೆಯಾಗಿದೆ ಎಂದು ತಿಳಿಸಿದರು.

ಹಾಸನಾಂಬೆ ಜಾತ್ರಾ ಮಹೋತ್ಸವ ಕೆಎಸ್ಆರ್‌ಟಿಸಿಯಿಂದ ಟೂರ್ ಪ್ಯಾಕೇಜ್ : ಬೆಂಗಳೂರು,ಅ.27-ವರ್ಷಕ್ಕೊಮೆ ಭಕ್ತ-ರಿಗೆ ದರ್ಶನ ಭಾಗ್ಯ ನೀಡುವ ಐತಿಹಾಸಿಕ ಹಾಸನಾಂಬ ದೇವಿಯ ದರ್ಶನಕ್ಕೆ ತೆರಳುವ ಭಕ್ತರ ಅನುಕೂಲಕ್ಕಾಗಿ ಕೆಎಸ್ಆರ್‌ಟಿಸಿ ವತಿಯಿಂದ ವಿಶೇಷ ಪ್ರವಾಸ ಪ್ಯಾಕೇಜ್‌ಗಳನ್ನು ಪರಿಚಯಿಸಿದೆ.ಅ.30 ರಿಂದ ನ.10 ರವರೆಗೆ ಬೆಂಗಳೂರು ಮತ್ತು ಮೈಸೂರಿನಿಂದ ಐರಾವತ ಹಾಗೂ ಅಶ್ವಮೇಧ ಬಸ್‌ಗಳಲ್ಲಿ ಒಂದು ದಿನದ ಪ್ರವಾಸ ಸೌಲಭ್ಯ ಕಲ್ಪಿಸಲಾಗಿದೆ.

ಹಾಸನಾಂಬ ದೇವಿಯ ದರ್ಶನದ ಜೊತೆಗೆ ಸಿದ್ದೇಶ್ವರ ದೇವಾಲಯ ಮತ್ತು ದೇವಿಗೆರೆ ಕಲ್ಯಾಣಿ ದೇವಾಲಯವನ್ನೂ ವೀಕ್ಷಿಸಲು ಅವಕಾಶವಿದೆ. ಮೈಸೂ-ರಿನಿಂದ ಹೊರಡುವ ಪ್ಯಾಕೇಜ್‌ನಲ್ಲಿ ಹೊಳೆನರಸೀಪುರದ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯಕ್ಕೂ ಭೇಟಿ ನೀಡಬಹುದು. ಪ್ರತಿ ಪ್ರಯಾಣಿಕರ ಟಿಕೆಟ್ ದರದಲ್ಲಿ 1 ಸಾವಿರ ರೂ. ಮೌಲ್ಯದ ದೇವಿಯ ಅಧಿಕೃತ ವಿಶೇಷ ಪ್ರವೇಶ ದರ್ಶನದ ಟಿಕೆಟ್ ಸೇರಿಸಲಾಗಿದೆ.

ನಗರದಿಂದ ಎರಡು ಬಗೆಯ ಪ್ಯಾಕೇಜ್: ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಿಂದ ಬೆಳಗ್ಗೆ 6 ಗಂಟೆಗೆ ಎರಡೂ ಮಾದ-ರಿಯ ಬಸ್‌ಗಳು ಹೊರಡಲಿವೆ.ಐರಾವತ ವೋಲ್ವೊ ಬಸ್‌ನಲ್ಲಿ ತೆರಳಿ ಸಂಜೆ 7 ಗಂಟೆಗೆ ಹಿಂದಿರುಗುವ ಪ್ಯಾಕೇಜ್‌ನ ದರ ಪ್ರತಿ ವ್ಯಕ್ತಿಗೆ 2500 ರೂ. ಅಶ್ವಮೇಧ ಬಸ್‌ನಲ್ಲಿ ತೆರಳುವವರಿಗೆ ಪ್ರತಿ ವ್ಯಕ್ತಿಗೆ 2 ಸಾವಿರ ರೂ.ದರ ನಿಗಧಿಪಡಿಸಲಾಗಿದ್ದು, ಸಂಜೆ 8 ಗಂಟೆಗೆ ಬೆಂಗಳೂರು ತಲುಪುವ ವೇಳಾಪಟ್ಟಿ ರೂಪಿಸಲಾಗಿದೆ. ಈ ಎರಡು ಪ್ಯಾಕೇಜ್‌ಗಳಲ್ಲಿ ಒಟ್ಟು ಪ್ರಯಾಣದ ದೂರ 380 ಕಿ.ಮೀ ಆಗಿದೆ.ಪ್ಯಾಕೇಜ್ ದರದಲ್ಲಿ ಹಾಸನಾಂಬ ದೇವಿಯ 1 ಸಾವಿರ ರೂ. ಮೌಲ್ಯದ ವಿಶೇಷ ದರ್ಶನದ ಟಿಕೆಟ್ ಸೇರಿದ್ದರೂ, ಊಟ,ಉಪಹಾರ ಮತ್ತು ದೇವಾಲಯಗಳಲ್ಲಿ ವಿಧಿಸುವ ಇತರ ಪ್ರವೇಶ ಶುಲ್ಕಗಳನ್ನು ಪ್ರಯಾಣಿಕರೇ ಪ್ರತ್ಯೇಕವಾಗಿ ಭರಿಸಬೇಕು. ಮಕ್ಕಳಿಗೆ ಪ್ರತ್ಯೇಕ ದರ ನಿಗಧಿಪಡಿಸಲಾಗಿದೆ.

ವಿಶೇಷ ಪ್ರವಾಸ ಪ್ಯಾಕೆಜ್‌ಗಳ ಕುರಿತು ಮಾಹಿತಿಗೆ, ಟಿಕೆಟ್ ಕಯ್ದಿರಿಸಲು ದೂ. ಸಂ.7760990518,7760990519 ಅನ್ನು ಸಂಪರ್ಕಿಸಬಹುದು. ಆನ್‌ಲೈನ್ ಬುಕ್ಕಿಂಗ್ ಮತ್ತು ಹೆಚ್ಚಿನ ವಿವರಗಳಿಗೆ ನಿಗಮದ ಅಧಿಕೃತ ವೆಬ್‌ಸೈಟ್ www.ksrtc.in ಭೇಟಿ ನೀಡಬಹುದು ಎಂದು ಕೆಎಸ್ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ವಚನ ದರ್ಶನ

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು ಸಸಿಯೊಳಗಣ ರಸದ ರುಚಿಯಂತಿದ್ದಿತ್ತು, ನೆನೆಯೊಳಗಣ ಪರಿಮಳದಂತಿದ್ದಿತ್ತು,ಕೂಡಲ ಸಂಗಮದೇವಾ, ಕನ್ನೆಯ ಸ್ನೇಹದಂತಿದ್ದಿತ್ತು

ನೀವು ಕೇಳುತ್ತಿರುವುದು ಶಿವಶರಣ ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನಗಳಲ್ಲೊಂದಾದ ಉದಕದೊಳಗೆ ಬಚ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು.

ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ಭಗವಂತನ ಕೂಡಲಸಂಗಮದೇವನ ಅಸ್ತಿತ್ವ ಮತ್ತು ಆತನ ಸಾಕ್ಷಾತ್ಕಾರದ ಅನುಭೂತಿಯನ್ನು ಅದ್ಭುತವಾದ ಉಪಮೆಗಳ ಮೂಲಕ ವಿವರಿಸಿದ್ದಾರೆ.

ಉದಕದೊಳಗೆ ಬಚ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು: ನೀರಿನ ಆಳದಲ್ಲಿ ಅಡಗಿರುವ ಬಡಬಾಗ್ನಿಯಂತೆ (ಜ್ವಾಲೆ) ದೇವರ ಶಕ್ತಿ ಜಗತ್ತಿನ ಕಣಕಣದಲ್ಲೂ ಗುಪ್ತವಾಗಿ ಅಡಗಿದೆ. ನೀರು ಮತ್ತು ಬೆಂಕಿ ಪರಸ್ಪರ ವಿರುದ್ಧವಾಗಿದ್ದರೂ ನೀರೊಳಗೆ ಉಷ್ಣತೆ ಇರುವಂತೆ, ಪ್ರಕೃತಿಯಲ್ಲಿ ಭಗವಂತನು ಅದೃಶ್ಯನಾಗಿ ನೆಲೆಸಿದ್ದಾನೆ.

ಸಸಿಯೊಳಗಣ ರಸದ ರುಚಿಯಂತಿದ್ದಿತ್ತು
ಚಿಕ್ಕದಾದ ಸಸ್ಯ ಅಥವಾ ಗಿಡದೊಳಗೆ ಇರುವ ರಸದ ರುಚಿಂ-ಯನ್ನು ಮೇಲ್ನೋಟಕ್ಕೆ ನೋಡಿ ತಿಳಿಯಲು ಸಾಧ್ಯವಿಲ್ಲ, ಅದನ್ನು ಅನುಭವಿಸಿಯೇ ತಿಳಿಯಬೇಕು. ಹಾಗೆಯೇ ದೇವರನ್ನು ಕಣ್ಣಿಗೆ ಕಾಣದಿದ್ದರೂ ಅನುಭವದಿಂದ ಅರಿಯಬಹುದು.

ನೆನೆಯೊಳಗಣ ಮೊಗ್ಗಿನೊಳಗಣ ಪರಿಮಳದಂತಿದ್ದಿತ್ತು ಹೂವಾಗುವ ಮುನ್ನ ಮೊಗ್ಗಿನೊಳಗೆ ಸುಗಂಧವು ಹೇಗೆ ಅಡಗಿರುತ್ತದೆಯೋ, ಹಾಗೆ ಭಗವಂತನ ಅಸ್ತಿತ್ವವು ಜಗತ್ತಿನಲ್ಲಿ ಅವಿಭಾಜ್ಯವಾಗಿದೆ. ಹೂವು ಅರಳಿದಾಗ ಪರಿಮಳ ಹರಡುವಂತೆ, ಭಕ್ತಿ ಪಕ್ವವಾದಾಗ ದೇವರು ಪ್ರಕಟನಾಗುತ್ತಾನೆ.

ಕನ್ಯೆಯೊಳಗಣ ಒಲವಿನಂತಿದ್ದಿತ್ತು
ಒಬ್ಬ ಹೆಣ್ಣುಮಗಳ ಮನಸ್ಸಿನಲ್ಲಿರುವ ಪ್ರೀತಿ ಅಥವಾ ಒಲವು ಕಣ್ಣಿಗೆ ಕಾಣಿಸುವುದಿಲ್ಲ, ಆದರೆ ಅವಳು ಪ್ರೀತಿಸಿದಾಗ ಮಾತ್ರ ಅದು ವ್ಯಕ್ತವಾಗುತ್ತದೆ. ಅದೇ ರೀತಿ ಭಕ್ತನಲ್ಲಿ ನಿಜವಾದ ಭಕ್ತಿ ಮೂಡಿದಾಗ ಕೂಡಲಸಂಗಮದೇವನ ಸಾನ್ನಿಧ್ಯದ ಅರಿವಾಗುತ್ತದೆ.

ದೇವರು ಎಲ್ಲೋ ದೂರದಲ್ಲಿಲ್ಲ, ಅವನು ನಮ್ಮೊಳಗೇ, ಈ ಸೃಷ್ಟಿಯ ಪ್ರತಿ ಜೀವಿಯಲ್ಲೂ ಅತ್ಯಂತ ಸೂಕ್ಷ್ಮವಾಗಿ, ಅದೃಶ್ಯವಾಗಿ ಹಾಸುಹೊಕ್ಕಾಗಿದ್ದಾನೆ ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ತಿಳಿಸಿಕೊಟ್ಟಿದ್ದಾರೆ.ಬಸವಾದಿ ಶರಣರ ವಚನಗಳು ಮನುಕುಲದ ದಾ-ರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ತಾಂಡವಪುರ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾಕ್ಷೇತ್ರಕ್ಕೆ ಸೇರುವ ತಾಂಡವಪುರ ಗ್ರಾಮ ಪಂಚಾಯತಿ ಕಚೇರಿಯಲ್ಲಿ



ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ರವರು ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಮಾತನಾಡುತ್ತಾ ನಾಡಿನ ಜನತೆಗೆ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಶುಭಶಯ ಕೋರುವ ಮೂಲಕ ಅವರ ತತ್ವ ಆದರ್ಶಗಳನ್ನು ನಾವೆಲ್ಲರೂ ಪಾಲಿಸೋಣ ಎಂದು ಹೇಳಿದರು ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಸಿಬ್ಬಂದಿ ವರ್ಗದ ನಂಜಪ್ಪ ಶ್ರೀಕಂಠ ಶಾಂತ ಪೌರಕಾರ್ಮಿಕರು ಹಾಗೂ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

ಮುಂದಿನ ಮುಂಗಾರಿನವರೆಗೆ ನೀರೇ ಜೀವಾಮೃತ: ನೀರಿನ ಪೋಲು ತಡೆಗೆ ಕಂಪ್ಲಿ ಮುಖ್ಯಾಧಿಕಾರಿ ಕರೆ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಈ ವರ್ಷ ಮಳೆ ಕೊರತೆ ಎದುರಾಗಿರುವುದರಿಂದ ಸಾರ್ವಜನಿಕರು ಕುಡಿಯುವ ಮತ್ತು ಬಳಕೆಯ ನೀರನ್ನು ಅತ್ಯಂತ ಮಿತವ್ಯಯದಿಂದ ಬಳಸಬೇಕು ಹಾಗೂ ನೀರಿನ ತೊಂದರೆಯಾಗದಂತೆ ಪುರಸಭಾ ಆಡಳಿತದೊಂದಿಗೆ ಕೈಜೋಡಿಸಬೇಕು ಎಂದು ಪುರಸಭೆಯ ಪ್ರಭಾರ ಮುಖ್ಯಾಧಿಕಾರಿ ಬಿ. ಮಲ್ಲಿಕಾರ್ಜುನ ಮನವಿ ಮಾಡಿದ್ದಾರೆ.



ಈ ಕುರಿತು ಸೋಮವಾರ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, "2027ರ ಮೇ ತಿಂಗಳವರೆಗೆ, ಅಂದರೆ ಮುಂದಿನ ಮುಂಗಾರು ಮಳೆಯಾಗುವವರೆಗಿನ ಮುಂದಿನ ಎಂಟೊಂಬತ್ತು ತಿಂಗಳುಗಳ ಕಾಲ ಲಭ್ಯವಿರುವ ನೀರನ್ನು ಅತ್ಯಂತ ಜಾಗರೂಕತೆಯಿಂದ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಸಾರ್ವಜನಿಕರು ನೀರಿನ ಸದ್ಬಳಕೆಗೆ ಆದ್ಯತೆ ನೀಡಬೇಕು" ಎಂದು ಕೋರಿದ್ದಾರೆ. ಸಾರ್ವಜನಿಕರು ಜವಾಬ್ದಾರಿಯಿಂದ ವರ್ತಿಸಿ, ಎಲ್ಲೂ ನೀರು ಪೋಲಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101